# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 73 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 20–09–2023 ಬುಧವಾರ | ಪುಟ: 4 | ಬೆಲೆ : ರೂ.2–00

Volume - 01 Issue - 73 | Title- Code: KARKAN 28269 | Chitradurga | Date: 20-09-2023 Wednesday | Page: 4 | Price: Rs. 2-00



**ಒಳಪುಟದ ಸುದ್ದಿಗಳು**

ಕರ್ನಾಟಕಕ್ಕೆ ಮೊದಲ ನೀರಾವರಿ ಸೌಲಭ್ಯ ಒದಗಿಸಿದ ಕೀರ್ತಿ ವಿಶ್ವೇಶ್ವರಯ್ಯನವರದ್ದು: ಶಾಸಕ 2

ಕಲೆ ಮೂಲಕ ಜಗತ್ತಿಗೆ ಹೊಸ ಶಕ್ತಿ ನೀಡಿದ ಮಹಾನ್ ತಪಸ್ವಿ ವಿಶ್ವಕರ್ಮ: ರಘುಮೂರ್ತಿ 3

ಕುವೆಂಪು ವಿವಿ ಪ್ರಶಸ್ತಿಗಿಂತ ಜನತೆ ನೀಡಿದ ರಸ್ತೆ ರಾಜ ಬಿರುದು ಹೆಚ್ಚು 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಫೋಟೋಶೂಟ್‌ಗೆ ರಾಹುಲ್ ಗಾಂಧಿ ಪಕ್ಕ ನಿಲ್ಲಲು MP ಹರಸಾಹಸ

ಇಂದಿನಿಂದ ಹಳೇ ಸಂಸತ್ ಭವನದಲ್ಲಿ ಕಲಾಪಕ್ಕೆ ವಿದಾಯ ಹಿನ್ನೆಲೆ ಹಳೇ ಸಂಸತ್ ಭವನದ ಮುಂದೆ ಸಂಸದರ ಫೋಟೋಶೂಟ್ ನಡೆದಿದೆ. ಫೋಟೋಶೂಟ್‌ನಲ್ಲಿ ಪ್ರಧಾನಿ ಮೋದಿ, ಸ್ಪೀಕರ್ ಓಂಬಿರ್ಲಾ, ಉಪರಾಷ್ಟ್ರಪತಿ ಜಗದೀಪ್ ದನ್ಕರ್, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಖರ್ಗೆ, ಎಲ್ಲಾ ಪಕ್ಷಗಳ ಸಂಸದರು, ರಾಜ್ಯಸಭಾ ಸದಸ್ಯರು ಭಾಗಿಯಾಗಿದ್ದಾರೆ.

### ಫೋಟೋಶೂಟ್ ವೇಳೆ ರಾಜ್ಯಸಭಾ ಸದಸ್ಯ ನರಹರಿ ಅಮಿನ್ ಅಸ್ವಸ್ಥ

ಇಂದಿನಿಂದ ಹಳೇ ಸಂಸತ್ ಭವನದಲ್ಲಿ ಕಲಾಪಕ್ಕೆ ವಿದಾಯ ಹಿನ್ನೆಲೆ ಹಳೇ ಸಂಸತ್ ಭವನದ ಮುಂದೆ ಸಂಸದರ ಫೋಟೋಶೂಟ್ ಮಾಡಿಸಿದ್ದು ಈ ವೇಳೆ ರಾಜ್ಯಸಭಾ ಸದಸ್ಯ ನರಹರಿ ಅಮಿನ್ ಅಸ್ವಸ್ಥಗೊಂಡಿದ್ದಾರೆ. ಬಿಜೆಪಿ ರಾಜ್ಯಸಭಾ ಸದಸ್ಯ ನರಹರಿ ಮೂರ್ಛೆಯಿಂದ ಅಸ್ವಸ್ಥಗೊಂಡಿದ್ದಾರೆ.

### ಹೊಸ ಸಂಸತ್ ಭವನದಲ್ಲಿ ವಿಶೇಷ ಅಧಿವೇಶನ ಶುರು

ಇಂದು ಹಳೇ ಸಂಸತ್‌ನಿಂದ ಹೊಸ ಸಂಸತ್ ಭವನಕ್ಕೆ ಕಲಾಪ ಶಿಫ್ಟ್ ಆಗಲಿದೆ. ಇಂದು ಪ್ರಧಾನಿ ಮೋದಿ ಹೊಸ ಸಂಸತ್ ಭವನ ಪ್ರವೇಶಿಸಲಿದ್ದಾರೆ. ಕಾಲ್ನಡಿಗೆಯಲ್ಲಿ ಸಂವಿಧಾನದ ಪ್ರತಿಯೊಂದಿಗೆ ಹೊಸ ಸಂಸತ್‌ಗೆ ಮೋದಿ ಆಗಮಿಸಲಿದ್ದಾರೆ. ಹೊಸ ಸಂಸತ್ ಭವನದಲ್ಲಿ ಇಂದು ಮಧ್ಯಾಹ್ನ ಕಲಾಪ ಆರಂಭವಾಗಲಿದೆ. ಲೋಕಸಭೆಯಲ್ಲಿ ಮಧ್ಯಾಹ್ನ 1.15ಕ್ಕೆ ವಿಶೇಷ ಅಧಿವೇಶನ ಕಲಾಪ ಆರಂಭ. ರಾಜ್ಯಸಭೆಯಲ್ಲಿ ಮಧ್ಯಾಹ್ನ 2:15ಕ್ಕೆ ಕಲಾಪ ಆರಂಭವಾಗಲಿದೆ.

# ವಿಜೃಂಭಣೆಯಿಂದ ನಡೆದ ಮಧ್ಯಾಹ್ನದ ಮಾರಿ ಗೌರಸಮುದ್ರ ಮಾರಮ್ಮ ದೇವಿ ಜಾತ್ರೆ







» **ಚಳ್ಳಕೆರೆ**

ಮಧ್ಯ ಕರ್ನಾಟಕದ ವೈಭವದ ಜಾತ್ರೆಗಳಲ್ಲಿ ಒಂದಾದ ಗೌರಸಮುದ್ರ ಮಾರಮ್ಮದೇವಿಯ ಜಾತ್ರೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ಅದ್ದೂರಿಯಾಗಿ ನಡೆಯಿತು.

ಮಧ್ಯಾಹ್ನ ಮಾರಿ ಎಂದೆ ಖ್ಯಾತಿಯಾದ ಈ ಜಾತ್ರೆಗೆ ಆಂಧ್ರಪ್ರದೇಶವೂ ಸೇರಿದಂತೆ ಕರ್ನಾಟಕದ ಮೂಲೆ, ಮೂಲೆಗಳಿಂದ ಭಕ್ತರ ಆಗಮಿಸಿ ದೇವಿಯ ದರ್ಶನ ಪಡೆದರು. ಗ್ರಾಮದಿಂದ ಸುಮಾರು ಎರಡೂರು ಕಿ.ಮೀ ದೂರದ ತುಮಲು ಪ್ರದೇಶಕ್ಕೆ ಬೆತ್ತದ ಪೆಟ್ಟಿಗೆ ಮೇಲೆ ದೇವಿ ಆಗಮಿಸುತ್ತಲ್ಲೇ ಭಕ್ತರು ಜೈಕಾರಗಳೊಂದಿಗೆ ತಾವು ಬೆಳೆದ ಈರುಳ್ಳಿ, ಹೂ, ಬಾಳೆ ಹಣ್ಣು, ಕೋಳಿ ದೇವಿಯ ಮೇಲೆ ತೂರುವ ಮೂಲಕ ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಬೇಡಿದರು. ನಂತರ ತುಮಲು ಪ್ರದೇಶವನ್ನು ಪ್ರದಕ್ಷಿಣೆ ಹಾಕಿ ತುಮಲುನ ಒಳಗೆ ಪ್ರತಿಷ್ಠಾಪಿಸಿ ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಕಳೆದ ಬಾರಿಗಿಂತ ಈ ಬಾರಿ ಭಕ್ತರು ಕಡಿಮೆಯಾದರೂ ಭಕ್ತಿಯ ಪಾರಕಾಷ್ಠೆ ಮುಗಿಲು ಮುಟ್ಟಿತ್ತು. ದೇವಿಯ ಮೆರವಣಿಗೆಯುದ್ದಕ್ಕೂ ವಿವಿಧ ಬುಡಕಟ್ಟು ಕಲಾಮೇಳಗಳೊಂದಿಗೆ ದೇವಿ ಮೆರವಣಿಗೆ ಸಾಗಿತು. ದೇವಿಯ ದರ್ಶನಕ್ಕಾಗಿ ಜಿಲ್ಲಾ, ತಾಲ್ಲೂಕು, ಪೊಲೀಸ್ ಇಲಾಖೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು. ಸೋಮವಾರ ರಾತ್ರಿಯಿಂದಲೇ ದೇವಸ್ಥಾನ ಮತ್ತು ತುಮಲು ಪ್ರದೇಶದ ಸುತ್ತಮುತ್ತ ಸೇರುವ ಭಕ್ತರು ಮಂಗಳವಾರ ರಾತ್ರಿ ತುಮಲು ಪ್ರದೇಶದಲ್ಲಿ ಯಾರೂ ಇಲ್ಲದಂತೆ ಖಾಲಿಯಾಗುತ್ತಾರೆ. ಪ್ರತಿವರ್ಷದ ವಾಡಿಕೆಯಂತೆ ದೇವಸ್ಥಾನದ ಮುಂದಿರುವ ಗರಡು ಗಂಭದ ಮೇಲೆ ದೀಪ ಹಚ್ಚಿದ ನಂತರ ಜಾತ್ರೆ ಸಂಪನ್ನವಾಗಲಿದ್ದು, ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ನೆರೆದಿದ್ದ ಲಕ್ಷಾಂತರ ಭಕ್ತರು ಕಾತುರದಿಂದ ಕಾಯುತ್ತಿದ್ದರು.

ಬಿಸಿಲು ದುರ್ಗಿ ಎಂದು ಕರೆಸಿಕೊಳ್ಳುವ ಈ ದೇವಿಯ ಮೂಲ ಸ್ಥಾನವೇ ತುಮಲು, ಭಾದ್ರಪದ ಮಾಸದ ಮಂಗಳವಾರದಂದು ನಡೆಯುವ ಈ ಪರಿಷೆಗೆ ಸಾವಿರಾರು ಭಕ್ತರು ದೇವಿಯ ಮೂಲ ಸ್ಥಾನ ತುಮಲು ಪ್ರದೇಶಕ್ಕೆ ಬೆತ್ತದ ಪೆಟ್ಟಿಗೆಯಲ್ಲಿ ದೇವಿ ಆಗಮಿಸುವುದನ್ನು ಕಾಯುತ್ತಾರೆ. ಜಿಲ್ಲಾಡಳಿತ ಬೇವಿನ ಉಡುವುದು, ಪ್ರಾಣಿ ಬಲಿ ನಿಷೇದಿಸಿದ್ದರೂ ಅಲ್ಲಲ್ಲಿ ಪ್ರಾಣಿ ಬಲಿ, ಮಕ್ಕಳು ಬೇವಿನ ಸೀರೆ ಉಟ್ಟು ದೇವಸ್ಥಾನ ಪ್ರದಕ್ಷಿಣೆ ಹಾಕುವುದು ಕಂಡುಬಂತು.

ಪುಟ 2



ಚಳ್ಳಕೆರೆ ಶಾಸಕರಾದ ಟಿ.ರಘುಮೂರ್ತಿ ಅವರು ಮಧ್ಯ ಕರ್ನಾಟಕದ ಪ್ರಸಿದ್ಧ ಶಕ್ತಿ ದೇವತೆ ಗೌರ ಸಮುದ್ರದ ಮಾರಮ್ಮದೇವಿ ಜಾತ್ರಾ ಮಹೋತ್ಸವದಲ್ಲಿ ಕುಟುಂಬ ಸಮೇತ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿ ಉತ್ತಮ ಮಳೆ ಬೆಳೆ ಆಗಲಿ ಎಂದು ದೇವಿಯಲ್ಲಿ ಪ್ರಾರ್ಥಿಸಿದರು.

## ಇದು ನಮ್ಮ ಶ್ರೀ ಅಹೋಬಲ ಟಿವಿಎಸ್ ಕುಟುಂಬ, ಮಹಿಳಾ ಉದ್ಯೋಗಿಗಳಿಗೆ ಸೀರೆ ಕೊಟ್ಟು ಸಂಭ್ರಮ




» **ವಿಶೇಷ ವರದಿ**

ಚಿತ್ರದುರ್ಗ : ಒಂದು ಕುಟುಂಬ ಅಂದ ಮೇಲೆ ಹಬ್ಬ ಹರಿದಿನಗಳಲ್ಲಿ ತಂದೆ, ತಾಯಿಗಳು, ಮಕ್ಕಳಿಗೆ ,ಅಣ್ಣಂದಿರು ತಂಗಿಯರಿಗೆ ಬಟ್ಟೆಗಳನ್ನು ಕೊಡಿಸುವುದು ಸಾಮಾನ್ಯ, ಖಾಸಗಿ ಕಂಪನಿಗಳಲ್ಲಿ ಕುಟುಂಬದಂತೆ ಕಾಣುವುದು ತುಂಬಾ ವಿರಳ ಆದರೆ ವಿಶೇಷವಾಗಿ ಹಬ್ಬ ಆಚರಿಸುವ ಬಟ್ಟೆಗಳನ್ನು ಉಡುಗೊರೆಯಾಗಿ ಕೊಡುವುದು ವಿರಳವಾಗಿದೆ. ಈ ಕಂಪನಿಯಲ್ಲಿ ಉದ್ಯೋಗಿಗಳು ಕುಟುಂಬಸ್ಥರು,ಅವರಸಂತಸದಲ್ಲಿನಾವು ಜೊತೆಗಿರುತ್ತೇನೆ ಎಂಬ ಭಾವನೆಯಲ್ಲಿ ಎಲ್ಲಾ ಮಹಿಳಾ ಉದ್ಯೋಗಿಗಳಿಗೆ ಸೀರೆ ಕೊಟ್ಟು ಕುಟುಂಬದವರಂತೆ ಪ್ರೀತಿಸಿದ್ದು ಬೇರೆಲ್ಲೂ ಅಲ್ಲ ಚಿತ್ರದುರ್ಗ ನಗರದ ಶ್ರೀ ಅಹೊಬಲ ಟಿವಿಎಸ್ ನಲ್ಲಿ ಎಂಬ ಸಂತಸವಿದೆ.

ಹೌದು ಇಂತ ಸಮಧುರ ಕ್ಷಣವನ್ನು ಶ್ರೀ ಅಹೋಬಲ ಟಿವಿಎಸ್ ನಲ್ಲಿ ನೋಡಬಹುದು. ಗೌರಿ ಹಬ್ಬದ ಪ್ರಯುಕ್ತ ಶೋ ರೂಂ ನಲ್ಲಿ ಕೆಲಸ ಮಾಡುವ ಎಲ್ಲಾ ಹೆಣ್ಣುಗಳಿಗೆ ಸುಂದರ ಸೀರೆಗಳನ್ನು ಕೊಡುವ ಮೂಲಕ ನೀವು ಸಹ ನಮ್ಮ ಕುಟುಂಬದವರು ಎಂಬ ಭಾವನೆಗಳ ಗಿಡವನ್ನು ನೆಟ್ಟು ಸಾರ್ವಜನಿಕರ ವಲಯದಲ್ಲಿ ಮಾದರಿಯಾಗಿದ್ದಾರೆ.

ಆಧುನಿಕ ಯುಗದಲ್ಲಿ ಮನುಷ್ಯ ಸಂಬಂಧಗಳು ಅಳಿಸುತ್ತಿದೆ.ಕೇಲವು ಸ್ವಂತ ಅಣ್ಣ ತಮ್ಮಂದಿರು ಸಹ ತಂಗಿಗಳಿಗೆ ಸೀರೆ ತಂದು ಹುಡಿ ತುಂಬುತ್ತಿಲ್ಲ. ತಂದೆ ತಾಯಿಗಳನ್ನು ಬೀದಿಗೆ ಅಥವಾ ಅನಾಥ ಆಶ್ರಮಕ್ಕೆ ತಳುತ್ತಿದ್ದಾರೆ. ಇಂತಹ ಸಮಯದಲ್ಲಿ ಶ್ರೀ ಅಹೋಬಲ ಟಿವಿಎಸ್ ನಲ್ಲಿ ಕೆಲಸ ನಿರ್ವಹಿಸುವ ಮಹಿಳಾ ಉದ್ಯೋಗಿಗಳಿಗೆ ಅವರ ಕೆಲಸಕ್ಕೆ ನಾವು ಸಂಬಳ ಕೊಡುತ್ತೇನೆ ಎಂಬುದು ಮನಸ್ಸಿನಲ್ಲಿಟ್ಟುಕೊಂಡ ಸುಮ್ಮನೆ ಆಗಬಹುದಿತ್ತು. ಆದರೆ ಇದು ನಮ್ಮ ಕುಟುಂಬ ನಮ್ಮ ಜೊತೆ ಅವರು ಸಹ ಸಂತಸದಲ್ಲಿ ಇರಬೇಕು ಎಂಬ ಮನೋಭಾವನೆಯಿಂದ ನಮ್ಮ ಅಕ್ಕ ತಂಗಿಯರು ಎಂಬ ಭಾವನೆಯಿಂದ ಸೀರೆ ಕೊಟ್ಟು ಸಿಹಿ ಹಂಚಿದ ಶ್ರೀ ಅಹೋಬಲ ಟಿವಿಎಸ್ ಶೋ ರೂಂ ಅವರ ಈ ಮನುಷ್ಯ ಸಂಬಂಧ ಗುಣಗಳು ಮತ್ತಷ್ಟು ಮಂದಿಗೆ ಸಂಸ್ಕೃತಿ ಬೆಳೆಸುವುಕ್ಕೆ ಮಾದರಿಯಾಗಿದ್ದಾರೆ.

> ನಮ್ಮ ಉದ್ಯೋಗಿಗಳನ್ನು ಸಂತೋಷದಿಂದ ಇರಬೇಕು. ನಾವು ಉದ್ಯೋಗಿಗಳಿಗೆ ಕಳೆದ ವರ್ಷ ಸಹ ಗೌರಿ ಹಬ್ಬದ ದಿದ ಸೀರೆ ಕೊಟ್ಟಿದ್ದೇವೆ. ಅದಂತೆ ಈ ವರ್ಷ ಕೊಟ್ಟಿದ್ದೇವೆ. ಉದ್ಯೋಗಿಗಳು ಕೇಲವ ಕಾರ್ಮಿಕರಲ್ಲ ಅವರು ನಮ್ಮ ಕುಟುಂಬದವರು. ಅವರ ಶ್ರಮ ಸಹ ನಮ್ಮನ್ನು ಕಡಿಮೆ ಅವಧಿಯಲ್ಲಿ ಹೆಚ್ಚು ಜನಪ್ರಿಯತೆ ಗಳಿಸಲ್ಲೂ ಸಾಧ್ಯವಾಯಿತು.ಜನರ ಪ್ರೀತಿ ಸಹಕಾರ ಹೀಗೆ ಇರಲಿ..
>
> » ಪಿ.ವಿ.ಅರುಣ್ ಕುಮಾರ್ ಮಾಲೀಕರು ಶ್ರೀ ಅಹೋಬಲ ಟಿವಿಎಸ್ ಚಿತ್ರದುರ್ಗ

> ಮಹಿಳಾ ಉದ್ಯೋಗಿಗಳಿಗೆ ಗೌರಿ ಹಬ್ಬ ವಿಶೇಷ ದಿನವಾಗಿದೆ. ಆ ಸಂದರ್ಭದಲ್ಲಿ ತವರು ಮನೆಯಿಂದ ಅಥವಾ ತಂದೆ ಮನೆಯಲ್ಲಿ ಹೊಸ ಸೀರೆ ಕೊಡುವುದು ಪದ್ದತಿ, ಆದರೆ ಮಹಿಳಾ ಉದ್ಯೋಗಿಗಳಿಗೆ ನಮ್ಮ ಶೋ ರೂಂ ಸೀರೆ ಕೊಡುವುದು ಅವರು ಸಹ ನಮ್ಮ ಕುಟುಂಬ ಎಂಬ ಭಾವನೆಯಲ್ಲಿ, ನಮ್ಮ ಹೆಣ್ಣು ಮಕ್ಕಳಿಗೆ ಸೀರೆ ಕೊಟ್ಟು ಸಂಭ್ರಮಿಸಿದ್ದೇವೆ.
>
> » ಮಂಜುಳ ಶ್ರೀ ಅಹೋಬಲ ಸ್ಟೀಲ್ ಅಂಡ್ ಸಿಮೆಂಟ್ ಉಪಾಧ್ಯಕ್ಷರು

## ಪ್ರಮುಖ ಸುದ್ದಿ

# ನಾರ್ಮಲ್ ಡೆಲಿವರಿಗೆ ಮೊದಲ ಆದ್ಯತೆ: ಡಾ.ಮಲ್ಲಿಕಾರ್ಜುನ್ ಕೀರ್ತಿ

### ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸೆಗೆ ಮನೆ ಮಾತಾಗುತ್ತಿದೆ ಕೀರ್ತಿ ಆಸ್ಪತ್ರೆ

ಕೋಟೆ ನಾಡಿನ ಜನತೆಗೆ ಅತಿ ಕಡಿಮೆ ಅವಧಿಯಲ್ಲಿ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ, ಸೇವೆ ಸಿಗುತ್ತದೆ ಎನ್ನುವ ಮಾತು ಜಿಲ್ಲೆಯಲ್ಲಿ ಅಷ್ಟೆ ಅಲ್ಲದೇ ಹೊರ ಜಿಲ್ಲೆಗಳಿಂದ ರೋಗಿಗಳು ಆಗಮಿಸುತಿರುವ ಮತ್ತು ಹೆಚ್ಚು ವೈದ್ಯಕೀಯ ತಜ್ಞತೆಯ ಅನುಭವ ಉಳ್ಳವರು ಮಾತ್ರ ಗುಣಮಟ್ಟದ ಸೇವೆ ನೀಡಲು ಸಾಧ್ಯ ಎಂಬುದನ್ನು ಜನರು ಮಾತನಾಡಿಕೊಳ್ಳುತ್ತಿದ್ದು ಎರಡು ದಶಕಗಳ ಕಾಲ ಲಂಡನ್‌ಲ್ಲಿ ಕಾರ್ಯನಿರ್ವಹಿಸಿದ ತಜ್ಞ ವೈದ್ಯರಾದ ಡಾ.ಮಲ್ಲಿಕಾರ್ಜುನ ಕೀರ್ತಿ



ರೋಗಿಗಳ ಪಾಲಿನ ಸಂಜೀವಿನಿಯಾಗಿ ಹೆಚ್ಚು ಜನಪ್ರಿಯತೆ ಪಡೆದುಕೊಂಡಿದ್ದಾರೆ.ನಗರದ ವಿ.ಪಿ.ಬಡಾವಣೆಯ ಕೀರ್ತಿ ಆಸ್ಪತ್ರೆಯ ಹೆರಿಗೆ ಮತ್ತು ಸ್ತ್ರೀರೋಗ ತಜ್ಞ ಡಾ.ಮಲ್ಲಿಕಾರ್ಜುನ್ ಇಂತಹ ಸೇವೆ ಸಲ್ಲಿಸುತ್ತಾ ಜಿಲ್ಲೆಯ ಮನೆ ಮಾತಾಗುತ್ತಿದ್ದಾರೆ.

ಪುಟ 4







# ಕರ್ನಾಟಕಕ್ಕೆ ಮೊದಲ ನೀರಾವರಿ ಸೌಲಭ್ಯ ಒದಗಿಸಿದ ಕೀರ್ತಿ ವಿಶ್ವೇಶ್ವರಯ್ಯನವರದ್ದು: ಶಾಸಕ ರಘುಮೂರ್ತಿ



» ಚಳ್ಳಕೆರೆ

ಮೈಸೂರು ರಾಜ್ಯದ ದಿವಾನರಾಗಿ ಕಾರ್ಯನಿರ್ವಹಿಸಿದ ಸರ್.ಎಂ.ವಿಶ್ವೇಶ್ವರಯ್ಯ ಮೈಸೂರು ಮಹಾರಾಜರ ಆದೇಶದಂತೆ ಕನ್ನಂಬಾಡಿ ಕಟ್ಟೆಯನ್ನು ಕೆಆರ್‌ಎಸ್‌ನಲ್ಲಿ ಕಟ್ಟುವ ಮೂಲಕ ಕರ್ನಾಟಕಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿದ ಹೆಗ್ಗಳಿಕೆಗೆ ಪಾತ್ರರಾದರು ಎಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ಅವರು, ಲೋಕೋಪಯೋಗಿ ಇಲಾಖೆ ಕಚೇರಿ ಆವರಣದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಪುತ್ಥಳಿಗೆ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಪುಷ್ಪಹಾರ ಅರ್ಪಿಸಿ ಜನ್ಮದಿನ ಶುಭಾಶಯಗಳನ್ನು ಕೋರಿದರು. ರಾಜ್ಯದ ಪ್ರತಿಯೊಬ್ಬ ಇಂಜಿನಿಯರಿಂಗ್ ವೃತ್ತಿಯವರಿಗೆ ಸರ್.ಎಂ.ವಿಶ್ವೇಶ್ವರಯ್ಯನವರು ಇಂದಿಗೂ ಆದರ್ಶ. ವಿಶ್ವೇಶ್ವರಯ್ಯನವರ ಹೆಸರು ಶಾಶ್ವತವಾಗಿ ಎಲ್ಲೆಡೆ ನೆಲೆಯೂರಿದೆ. ವಿಶ್ವಕಂಡ ಮಹಾನ್ ಇಂಜಿನಿಯರ್ ಎಂದರೆ ವಿಶ್ವೇಶ್ವರಯ್ಯನವರು ಎಂದರು.

ಸಹಾಯಕ ಕಾರ್ಯಪಾಲಕ ಅಭಿಯಂತರ ವಿಜಯಭಾಸ್ಕರ ಮಾತನಾಡಿ, ಇಂದು ಎಲ್ಲೆಡೆ ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ. ವಿಶೇಷವೆಂದರೆ ನಮ್ಮ ಕಚೇರಿಯ ಮಹಾದ್ವಾರದಲ್ಲೇ ಇವರ ಪ್ರತಿಮೆ ಇದೆ. ಇಂದಿಗೂ ಸಹ ನಾವು ಪ್ರತಿನಿತ್ಯ ಇವರಿಗೆ ನಮಿಸಿದೆ ಮುಂದೆ ಸಾಗುತ್ತೇವೆ. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ವಿಶ್ವೇಶ್ವರಯ್ಯನವರ ಸಾಧನೆಯನ್ನು ಯಾರೂ ಅಳಿಸಲು ಸಾಧ್ಯವಿಲ್ಲವೆಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತೆ ಎನ್.ಕಾವ್ಯ, ಇಂಜಿನಿಯರ್‌ರಾಜಪ್ಪ,ವಿಜಯಕುಮಾರ್,ನಗರಸಭಾಸದಸ್ಯರಾದ ಕೆ.ವೀರಭದ್ರಪ್ಪ, ಎಂ.ಜೆ.ರಾಘವೇಂದ್ರ, ಬಿ.ಟಿ.ರಮೇಶ್‌ಗೌಡ, ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಜಿ.ಬಾಲರೆಡ್ಡಿ, ಬಿ.ಕೆ.ಗುಜ್ಜಾರಪ್ಪ ಮುಂತಾದವರು ಉಪಸ್ಥಿತರಿದ್ದರು.

## ಸರ್.ಎಂ.ವಿಶ್ವೇಶ್ವರಯ್ಯನವರ ಬಹುಮುಖ ಪ್ರತಿಭೆ ಇಂದಿಗೂ ಆದರ್ಶ: ಕೆ.ನಾಗೇಶ್



ಚಳ್ಳಕೆರೆ: ತಾಂತ್ರಿಕ ವಿಭಾಗದಲ್ಲೂ ನಾವು ಇಂದು ಅಸಾಧಾರಣಾ ಸಾಧನೆಯನ್ನು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ, ಇದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಸರ್.ಎಂ.ವಿಶ್ವೇಶ್ವರಯ್ಯನವರ ನಿರಂತರ ಪರಿಶ್ರಮ ಇಂದು ನಮ್ಮಲ್ಲಿ ತಾಂತ್ರಿಕತೆ ಬೆಳೆಯಲು ಸಹಕಾರಿಯಾಗಿದೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಕೆ.ನಾಗೇಶ್ ತಿಳಿಸಿದರು. ಅವರು, ಇಲ್ಲಿನ ರೋಟರಿ ಬಾಲಭವನದಲ್ಲಿ ಇಂಜಿನಿಯರ್ ದಿನಾಚರಣೆ ಹಿನ್ನೆಲೆಯಲ್ಲಿ ಕ್ಲಬ್ ವತಿಯಿಂದ ನಾಲ್ವರು ಇಂಜಿನಿಯರ್‌ಗಳನ್ನು ಸನ್ಮಾನಿಸಿ, ಅಭಿನಂದಿಸಿ ಮಾತನಾಡಿದರು. ಕಳೆದ ಕೆಲವು ವರ್ಷಗಳಿಂದ ಇಂಜಿನಿಯರಿಂಗ್ ವಿಭಾಗದಲ್ಲಿ ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ ಇಂಜಿನಿಯರ್‌ಗಳಾದ ಕಾರ್ತಿಕ್, ವೀರಭದ್ರಪ್ಪ, ಗುರುರಾಜ್ ಮತ್ತು ವೆಂಕಟೇಶ್‌ರವರನ್ನು ಸನ್ಮಾನಿಸಲಾಯಿತು.

ವೀರಭದ್ರಪ್ಪ ಸನ್ಮಾನಿತರ ಪರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ರೋಟೇರಿಯನ್ ಡಾ.ಕೆ.ಎಂ.ಜಯಕುಮಾರ್, ಎಸ್.ಜಯಪ್ರಕಾಶ್, ಡಾ.ಎಲ್.ಎಸ್.ವೀರೇಶ್, ವಕೀಲ ಸಿದ್ದಾರ್ಥ, ಕೆ.ಎಂ.ಯತೀಶ್, ಕಾರ್ಯದರ್ಶಿ ಕಿರಣ್‌ಕುಮಾರ್, ಬಿಆರ್‌ಟಿ, ಕೆ.ಪ್ರಕಾಶ್, ಚಿದಾನಂದಮೂರ್ತಿ, ಎಸ್.ಮುರುಗೇಶ್, ಕೆ.ಜೆ.ಮಂಜುನಾಥ, ಪ್ರಹ್ಲಾದ್, ಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

# ಪಿಜಿಸಿಐಎಲ್ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಜೊತೆ ಒಡಂಬಡಿಕೆಗೆ ಡಿಸಿ ಸಹಿ

» ದಾವಣಗೆರೆ

ಪಿಜಿಸಿಐಎಲ್ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಸಾಮಾಜಿಕ ಒಣೆಗಾರಿಕೆ ನಿಧಿಯಡಿ ಜಿಲ್ಲೆಯ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿವಿಧ ತರಹದ 102 ಪರಿಕರಗಳನ್ನು ಖರೀದಿಸಲು ರೂ.6.83 ಕೋಟಿಗಳಿಗೆ ಜಂಟಿ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ಜಿಲ್ಲಾಧಿಕಾರಿ ಡಾ; ವೆಂಕಟೇಶ್ ಎಂ.ವಿ. ತಿಳಿಸಿದರು.

ಅವರು ಶುಕ್ರವಾರ ಪಿಜಿಸಿಐಎಲ್ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಸಿ.ಎಸ್.ಆರ್.ನಿಧಿಯ ನಿರ್ದೇಶಕರಾದ ಕೆ.ಎನ್.ಓಂಕಾರಪ್ಪ, ಪವರ್‌ಗ್ರಿಡ್ ಜನರಲ್ ಮ್ಯಾನೇಜರ್ ಹರೀಶ್‌ನಾಯರ್‌ರೊಂದಿಗೆಜಂಟಿಒಡಂಬಡಿಕೆಗೆ ಸಹಿ ಹಾಕಿದ ನಂತರ ಮಾತನಾಡಿದರು. ದಾವಣಗೆರೆ ತಾಲ್ಲೂಕಿನ ಆಲುವರ್ತಿ, ಆನಗೋಡು, ಅಣಜಿ, ಐಗೂರು, ಕೊಡಗನೂರು, ಮಾಯಕೊಂಡ, ರಾಮಗೊಂಡನಹಳ್ಳಿ, ಚನ್ನಗಿರಿ ತಾ; ತ್ಯಾವಣಿಗಿ, ಬಸವಾಪಟ್ಟಣ, ದಾಗಿನಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಜಿಕಲ್ ಪರಿಕರಗಳು ಸೇರಿದಂತೆ ಆಕ್ಸಿಜನ್ ಸಿಲಿಂಡರ್, ಪೋಟೋ ತೆರಪಿ, ಅಲ್ಟ್ರಾಸೌಂಡ್ ಸೇರಿದಂತೆ ಚಿಕಿತ್ಸೆಗೆ ಅಗತ್ಯವಿರುವ 102 ವಿವಿಧ ಬಗೆಯ ಪರಿಕರಗಳನ್ನು ಒದಗಿಸಲಾಗುತ್ತದೆ ಎಂದರು.




ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಪೌಷ್ಟಿಕತೆ, ಆರೋಗ್ಯ, ಶುದ್ಧ ಕುಡಿಯುವ ನೀರು ಪೂರೈಕೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಆದ್ಯತೆ ನೀಡುವ ಮೂಲಕ ಯಾರು ಸಹ ಚಿಕಿತ್ಸೆ ಲಭಿಸಲಿಲ್ಲ ಎಂಬ ಕಾರಣಕ್ಕೆ ಮರಣ ಹೊಂದಬಾರದೆಂಬ ಗುರಿಯೊಂದಿಗೆ ಸಿಎಸ್‌ಆರ್ ನಿಧಿಯನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತದೆ. ಈಗಾಗಲೇ ಜಿಲ್ಲಾ ಆಸ್ಪತ್ರೆಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದ್ದು ಇಲ್ಲಿ ಚಿಕಿತ್ಸೆಗೆ ಬಂದವರಿಗೆ ಯಾವುದೇ ಹಾನಿಯಾಗದಂತೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಜಿಲ್ಲಾ ಸರ್ಜನ್‌ಗೆ ಸೂಚನೆ ನೀಡಲಾಗಿದೆ ಎಂದರು.

ಪವರ್‌ಗ್ರಿಡ್ ಸಿಎಸ್‌ಆರ್ ನಿರ್ದೇಶಕರಾದ ಕೆ.ಎನ್.ಓಂಕಾರಪ್ಪನವರು ಮಾತನಾಡಿ ಈ ಹಿಂದೆ ರಸ್ತೆ ಅಭಿವೃದ್ದಿಗೆ ರೂ.2.85 ಕೋಟಿ ನೀಡಲಾಗಿದ್ದು ಒಟ್ಟು ಜಿಲ್ಲೆಗೆ ಈಗಾಗಲೇ 10.5 ಕೋಟಿ ಅನುದಾನ ಪವರ್‌ಗ್ರಿಡ್ ನಿಂದ ಬಂದಿರುತ್ತದೆ. ಇನ್ನೂ ಜಿಲ್ಲೆಗೆ 20 ರಿಂದ 30 ಕೋಟಿ ಅನುದಾನ ಬರಬೇಕಾಗಿದ್ದು ಯೋಜನೆಯನ್ನು ಸಲ್ಲಿಸಲಾಗಿದೆ. ಚಿಗಟೇರಿ ಆಸ್ಪತ್ರೆ ಇನ್ನೂ ಅಭಿವೃದ್ದಿ ಆಗಬೇಕಾಗಿದ್ದು ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ. ದಾವಣಗೆರೆ, ಚಿತ್ರದುರ್ಗ, ಹಾವೇರಿ, ಕಲಬುರಗಿ ಜಿಲ್ಲೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು ಒಟ್ಟು ರಾಜ್ಯಕ್ಕೆ 100 ಕೋಟಿ ಅನುದಾನ ತರಬೇಕೆಂಬ ಗುರಿ ಹೊಂದಲಾಗಿದೆ ಎಂದರು.

ಪವರ್‌ಗ್ರಿಡ್ ಜನರಲ್ ಮ್ಯಾನೇಜರ್ ಹರೀಶ್ ನಾಯರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ; ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ; ನಾಗೇಂದ್ರಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್ ಉಪಸ್ಥಿತರಿದ್ದರು.



ವಾಸವಿ ವಿದ್ಯಾಸಂಸ್ಥೆಯಲ್ಲಿ ಸಂವಿಧಾನ ಅಂಗೀಕರಿಸಿಕೊಂಡ ದಿನ ಹಾಗೂ ಸರ್ ಎಂ.ವಿಶ್ವೇಶ್ವರಯ್ಯನವರ ಜನ್ಮದಿನ ಆಚರಣೆ.

## ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಂಚೆ ಸೇವೆಗಳು ಒಂದೇ ಸೂರಿನಡಿ: ವೇಣುಗೋಪಾಲ್



» ದಾವಣಗೆರೆ

ಅಂಚೆ ಜನ ಸಂಪರ್ಕ ಅಭಿಯಾನವು ಅಂಚೆಯ ವಿವಿಧ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ ಜನರ ಮನೆ ಬಾಗಿಲಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ ಎಂದು ಅಂಚೆ ನಿರೀಕ್ಷಕ ವೇಣುಗೋಪಾಲ್ ತಿಳಿಸಿದರು.ಮಂಗಳವಾರ(ಸೆ.12) ಭಾರತೀಯ ಅಂಚೆ ಇಲಾಖೆಯೂ ದಾವಣಗೆರೆ ವಿಭಾಗದ ವತಿಯಿಂದ ಜಗಳೂರು ಅಂಚೆ ಕಚೇರಿಯಲ್ಲಿ ಆಯೋಜಿಸಿದ ಅಂಚೆ ಜನ ಸಂಪರ್ಕ ಅಭಿಯಾನ ಕುರಿತು ಅವರು ಮಾತನಾಡಿದರು. ಅಂಚೆ ಇಲಾಖೆಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾರ್ವಜನಿಕ ಸೇವೆಗಳು ಒಂದೇ ಸೂರಿನಡಿಯಲ್ಲಿ ಒದಗಿಸುವುದರ ಮೂಲಕ ದಾವಣಗೆರೆ ಅಂಚೆ ವಿಭಾಗವು ಯಶಸ್ವಿಯಾಗಿದೆ. ಈ ಅಭಿಯಾನದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಖಾತೆಗಳನ್ನು ತೆರೆದಿದ್ದು ಮತ್ತು ವಿವಿಧ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ ಜನರ ಮನೆ ಬಾಗಿಲಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ ಎಂದರು.ದಾವಣಗೆರೆ ಅಂಚೆ ಅಧೀಕ್ಷಕ ಚಂದ್ರಶೇಖರ್ ಮಾತನಾಡಿ, ಈಗಿನ ಆಧುನಿಕ ಜಗತ್ತಿಗೆ ತಕ್ಕಂತೆ ಅಂಚೆ ಇಲಾಖೆಯೂ ಬ್ಯಾಂಕಿಂಗ್ ವ್ಯವಹಾರದಲ್ಲಿ ಅಭಿವೃದ್ಧಿ ಹೊಂದಿದ್ದು, ಸಾಮಾನ್ಯ ಜನರಿಗೆ ತಮ್ಮ ಮನೆ ಬಾಗಿಲಿಗೆ, ಎಐಪಿಭ, ಡಿಜಿಟಲ್ ಅಕೌಂಟ್‌ಗಳನ್ನು ಮಾಡಿ ಕೊಡುವುದರ ಮೂಲಕ ಎಟಿಎಂ ಮತ್ತು ಫೋನ್ ಪೇ ಇಂತಹ ಆಧುನಿಕ ವ್ಯವಹಾರಗಳನ್ನು ಅಂಚೆ ಇಲಾಖೆಯು ಒದಗಿಸಿ ಅನ್ನಭಾಗ್ಯ, ಗೃಹಲಕ್ಷ್ಮಿ, ಪಿಎಂ ಕಿಸಾನ್, ಇಂತಹ ಅನೇಕ ಯೋಜನೆಗಳು ಪ್ರಯೋಜನಕಾರಿ ಸೌಲಭ್ಯಗಳನ್ನು ಜನರಿಗೆ ಒದಗಿಸುತ್ತಿದೆ. ಅಂಚೆ ಜೀವ ವಿಮೆ, ಗ್ರಾಮೀಣ ಅಂಚೆ ಜೀವ ವಿಮೆ, ಭಿಭಿ ಸೇವೆಗಳು, ಆಧಾರ್ ತಿದ್ದುಪಡಿ, ಆಧಾರ್ ನೋಂದಣಿ, ಸಾಮಾನ್ಯರು ಪಡೆಯಬಹುದಂತಹ ಹತ್ತು ಲಕ್ಷ ಮೌಲ್ಯದ ಅಪಘಾತ ವಿಮೆಗಳನ್ನು ಅಂಚೆಯ ಮೂಲಕ ಒದಗಿಸಲಾಗುತ್ತದೆ ಎಂದರು.

## ಫಾಸ್ಟ್ ನ್ಯೂಸ್

### ದುಗ್ಗಾವರ ರಸ್ತೆಯಲ್ಲಿ ಜೂಜಾಟ: 6040 ರೂ ವಶ

» ಚಳ್ಳಕೆರೆ

ಚಳ್ಳಕೆರೆ ಠಾಣಾ ವ್ಯಾಪ್ತಿಯ ದುಗ್ಗಾವರ ರಸ್ತೆಯ ಕಾಡಪ್ಪ ಎಂಬುವವರ ಜಮೀನು ಬಳಿ ಹಾಡುಹಗಲೇ ಜೂಜಾಟವಾಡುತ್ತಿದ್ದ ಜಯಣ್ಣ ಹಾಗೂ ಇತರೆ ಎಂಟು ಜನರನ್ನು ವಶಕ್ಕೆ ಪಡೆದುಕೊಂಡ ಪೊಲೀಸರು ಜೂಜಾಟದ ಹಣ 6040ರೂ ವಶಪಡಿಸಿಕೊಂಡಿರುತ್ತಾರೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಖಚಿತ ಮಾಹಿತಿ ಮೇರೆಗೆ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಜೂಜಾಟವಾಡುತ್ತಿದ್ದ ತಂಡವನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿದೆ ಎಂದು ಪಿಎಸ್‌ಐ ಕೆ.ಸತೀಶ್‌ನಾಯ್ಕ ತಿಳಿಸಿದ್ದಾರೆ.

### ಖೋ-ಖೋ ಬಾಲಕರ ವಿಭಾಗದಲ್ಲಿ ಆದರ್ಶ ಶಾಲೆ ಜಿಲ್ಲಾ ಮಟ್ಟಕ್ಕೆ ಆಯ್ಕೆ



» ಚಳ್ಳಕೆರೆ

ನಗರದ ಬಿಎಂ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ತಾಲ್ಲೂಕು ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟ ನಡೆದಿದ್ದು, ಅಂತಿಮ ದಿನದಂದು ಖೋ-ಖೋ ಬಾಲಕ ವಿಭಾಗದಲ್ಲಿ ತೀವ್ರ ಪೈಪೋಟಿ ನಡೆಸಿ ಆದರ್ಶ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆಂದು ಮುಖ್ಯೋಪಾಧ್ಯಾಯ ಅಶೋಕರೆಡ್ಡಿ ತಿಳಿಸಿದರು.

ಅವರು, ಪತ್ರಿಕೆಗೆ ಮಾಹಿತಿ ನೀಡಿ, ಶುಕ್ರವಾರ ಸಂಜೆ ನಡೆದ ಅಂತಿಮ ಹಣಾಹಣಿಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಗಳಿಸಿ ಜಿಲ್ಲಾ ಮಟ್ಟದತ್ತ ಕಾಲಿಟ್ಟಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯರೂ ಸೇರಿದಂತೆ ಎಲ್ಲಾ ಶಿಕ್ಷಕರು ಪ್ರತಿನಿತ್ಯ ಖೋ-ಖೋ ತಂಡಕ್ಕೆ ಆಟದ ಬಗ್ಗೆ ಹಲವಾರು ಮಾಹಿತಿಯನ್ನು ನೀಡುತ್ತಿದ್ದರು ಎನ್ನಲಾಗಿದೆ. ಗೆಲುವು ಸಾಧಿಸಿದ ತಂಡದ ನಾಯಕ ಆಕಾಶಯಾದವ್ ಹಾಗೂ ಎಲ್ಲಾ ಆಟಗಾರರನ್ನು ಶಿಕ್ಷಕರಾದ ಎಲ್.ರುದ್ರಮುನಿ, ಜಿ.ಎಂ.ವೀರಭದ್ರಪ್ಪ, ಇಬ್ರಾಹಿಂ, ಸೋಮೇಶ್ವರ, ಮುಕ್ತಾಯಕ್ಕಸಂಗಮ ಸವಿತ ಅಭಿನಂದಿಸುವುದಾಗಿ ಅವರು ತಿಳಿಸಿದರು

### ಚಿತ್ರದುರ್ಗ ನಗರ ಕಾಂಗ್ರೆಸ್ ಸೇವಾದಳದ ಬ್ಲಾಕ್ ಅಧ್ಯಕ್ಷರಾಗಿ ಹರ್ಷಿದಾಭಾನು ನೇಮಕ



» ಚಿತ್ರದುರ್ಗ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳದ ರಾಜ್ಯಾಧ್ಯಕ್ಷ ಎಂ.ರಾಮಚಂದ್ರ ಇವರ ಆದೇಶದಂತೆ ಚಿತ್ರದುರ್ಗ ನಗರ ಕಾಂಗ್ರೆಸ್ ಸೇವಾದಳದ ಬ್ಲಾಕ್ ಅಧ್ಯಕ್ಷರಾಗಿ ನೆಹರು ನಗರದ ಹರ್ಷಿದಾಭಾನು ಇವರನ್ನು ನೇಮಕ ಮಾಡಲಾಗಿದೆ.ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್ ಕಾಂಗ್ರೆಸ್ ಕಚೇರಿಯಲ್ಲಿ ಹರ್ಷಿದಾಭಾನುಗೆ ನೇಮಕ ಪತ್ರ ವಿತರಿಸಿ ಸೇವಾದಳದ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಪಕ್ಷ ಸಂಘಟನೆಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವಂತೆ ಸೂಚಿಸಿದರು. ಜಿಲ್ಲಾ ಕಾಂಗ್ರೆಸ್ ಸೇವಾದಳದ ಜಿಲ್ಲಾಧ್ಯಕ್ಷ ಭೂತೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಪಿ.ಸಂಪತ್‌ಕುಮಾರ್, ಡಿ.ಎನ್.ಮೈಲಾರಪ್ಪ, ಮುನಿರಾ ಎ.ಮಕಾಂದಾರ್, ಚಾಂದ್‌ಪೀರ್, ಕುಮಾರ್ ಡಿ.ಪಿಳ್ಳೆಕೆರೆನಹಳ್ಳಿ ಇನ್ನು ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಮಧ್ಯಾಹ್ನದ ಮಾರಿ ಗೌರಸಮುದ್ರ ಮಾರಮ್ಮ ದೇವಿ ಜಾತ್ರೆ

» ಮೊದಲ ಪುಟದಿಂದ

ಮಳೆ ಇಲ್ಲದ ಕಾರಣ ವಿಪರೀತ ದೂಳಿಗೆ ಭಕ್ತರು ನಲುಗಿದರು.ಕೆಲ ಕಡೆಗಳಲ್ಲಿ ರಸ್ತೆಗಳು ಗುಂಡಿಯಿಂದ ಕೂಡಿದ್ದರಿಂದ ವಾಹನಸವಾರರು ಹೈರಾಣಾದರು. ಜಿಲ್ಲಾ ರಕ್ಷಣಾಧಿಕಾರಿ ಧರ್ಮೆಂದ್ರಕುಮಾರ್ ಮೀನಾ ಮಾತನಾಡಿ, ಜಾತ್ರೆಗೆ ಬರುವ ಎಲ್ಲಾ ಭಕ್ತರಿಗೂ ಸೂಕ್ತ ಬಂದೋಬಸ್ ವ್ಯವಸ್ಥೆ ಮಾಡಲಾಗಿದೆ. ನಾಲ್ಕು ಡಿವೈಎಸ್ಪಿ, 12 ಸಿಪಿಐ, 24ಪಿಎಸ್‌ಐ, 54ಎಎಸ್‌ಐ ಸೇರಿದಂತೆ ಸುಮಾರು 600ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜನೆ ಮಾಡಲಾಗಿದೆ ಎಂದರು. ಮೊಳಕಾಲ್ಮೂರು ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣ, ಚಳ್ಳಕೆರೆ ಕ್ಷೇತ್ರದ ಶಾಸಕ ಟಿ.ರಘುಮೂರ್ತಿ, ಪತ್ನಿ ಗಾಯಿತ್ರಿರಘುಮೂರ್ತಿ, ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಎಸ್ಪಿ ಧರ್ಮೆಂದ್ರಕುಮಾರ್ ಮೀನಾ, ತಹಶೀಲ್ದಾರ್ ರೇಹಾನ್ ಪಾಷ, ಡಿವೈಎಸ್ಪಿ ಟಿ.ಬಿ.ರಾಜಣ್ಣ, ಇನ್ಸ್‌ಪೆಕ್ಟರ್ ಕೆ.ಸಮೀವುಲ್ಲಾ, ಎನ್.ತಿಮ್ಮಣ್ಣ, ಗ್ರಾಮ

## ಪ್ರಮುಖ ಸುದ್ದಿ

# ಸಂವಿಧಾನ ಪಾಲಿಸುವುದು ಪ್ರತಿ ನಾಗರಿಕನ ಕರ್ತವ್ಯ

» ಮೊಳಕಾಲ್ಮುರು

ಸಂವಿಧಾನ ಬದ್ದವಾದ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಪ್ರತಿಯೊಬ್ಬ ನಾಗರಿಕರು ಪಾಲಿಸಬೇಕು ಮತ್ತು ಗೌರವಿಸಬೇಕು ಎಂದು ಶಾಸಕರಾದ ಎನ್.ವೈ ಗೋಪಾಲ ಕೃಷ್ಣ ರವರು ಅಭಿಪ್ರಾಯ ವ್ಯಕ್ತ ಪಡಿಸಿದರು.

ಮೊಳಕಾಲ್ಮೂರು ಪಟ್ಟಣದ ತಾಲ್ಲೂಕು ಆಡಳಿತ ಸೌದ ಆವರಣದಲ್ಲಿ ಜಿಲ್ಲಾಡಳಿತ,ಜಿಲ್ಲಾ ಪಂಚಾಯಿತಿ,ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಮೊಳಕಾಲ್ಮುರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಪೀಠಿಕೆ ವಾಚನ ಮತ್ತು ಪ್ರಜಾ ಸತತ್ಮಾಕ ಹಕ್ಕುಗಳ ರಕ್ಷಣೆಗಾಗಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾಡಿನ ಮತ್ತು ದೇಶದ ಪ್ರತಿಯೊಬ್ಬ ನಾಗರಿಕರು ಸಂವಿಧಾನದ ಆಶಯಗಳಾದ ಸಂವಿಧಾನ ಬದ್ದವಾದ ಹಕ್ಕು ಮತ್ತು ಕರ್ತವ್ಯಗಳನ್ನು ಪಾಲಿಸಬೇಕು ಮತ್ತು ಗೌರವಿಸಬೇಕು ಭಾರತೀಯ ಸಂವಿಧಾನವು ಭಗವತ್ ಗೀತೆ, ಬೈಬಲ್ ಮತ್ತು ಕುರಾನ್ ದರ್ಮ ಗ್ರಂಥಗಳ ತತ್ವ ಸಿದ್ದಾಂತಗಳ ಅಳವಡಿಕೆಯ ಸಂವಿಧಾನವಾಗಿದೆ ನಮ್ಮ ಸಂವಿಧಾನವು ಸರ್ವ ಜನಾಂಗದ ಅಭಿವೃದ್ಧಿಗಾಗಿ ಮತ್ತು ಸರ್ವ ಜನಾಂಗದ ಉನ್ನತಿಗಾಗಿ ರಚನೆಯಾದ ಸಂವಿಧಾನವಾಗಿದೆ ಇಂತಹ ಮಹತ್ವ ಪೂರ್ಣ ಸಂವಿಧಾನದ ಪೀಠಿಕೆಯ ಮೂಲ ಆಶಯಗಳನ್ನು ಓದಿ ತಿಳಿದುಕೊಳ್ಳುವ ಮೂಲಕ ಸಂವಿಧಾನದ ತತ್ವ ಸಿದ್ದಾಂತಗಳನ್ನು ಪ್ರತಿಯೊಬ್ಬರು ಪಾಲಿಸಿ ಗೌರವಿಸಬೆಕಾಗಿದೆ ಎಂದು ತಿಳಿಸಿದರು.ಶಿಕ್ಷಕರು ಶಾಲೆಗಳಲ್ಲಿ ಕಡ್ಡಾಯವಾಗಿ ಸಂವಿಧಾನದ ಪೀಠಿಕೆಯನ್ನು ಓದಿಸಬೇಕು ವಿದ್ಯಾರ್ಥಿಗಳು ಸಂವಿಧಾನದ ಆಶಯಗಳನ್ನು ಹಾಗೂ ಸಂವಿಧಾನ ಬದ್ದವಾದ ಮೂಲಭೂತ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಓದಿಕೊಂಡು ತಮ್ಮ ಕುಟುಂಬದ ಪ್ರತಿಯೊಬ್ಬರಿಗೂ ಸಂವಿಧಾನದ ಪೀಠಿಕೆಯ ಮಹತ್ವದ ಬಗ್ಗೆ ತಿಳಿಸುವಂತಾಗಬೇಕು ಎಂದು ಹೇಳಿದರು.




ಭಾರತೀಯ ಸಂವಿದಾನದ ಮೂಲ ಆಶಯದಂತೆ ಸಂವಿಧಾನ ಬದ್ದವಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಪ್ರಜಾಸತತ್ಮಾಕ ಆಶಯಗಳೊಂದಿಗೆ ಸಾರ್ವಭೌಮತ್ವದ ರಾಷ್ಟ್ರದಲ್ಲಿ ಕಾನೂನಾತ್ಮಕ ಪರಿಕಲ್ಪನೆಯೊಂದಿಗೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಮಹದಾಶಯದೊಂದಿಗೆ ಸರ್ವಜನಾಂಗದ ಶಾಂತಿಯ ತೋಟದಂತಿರುವ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರತಿಯೊಬ್ಬ ನಾಗರಿಕನು ಮೇಲು ಕೀಳು ಎಂಬ ಬೇದ-ಭಾವ ವಿಲ್ಲದೆ ಸಮಾಜ ಮತ್ತು ಸಮುದಾಯಗಳಲ್ಲಿ ಗೌರವಯುತವಾಗಿ ಹೆಮ್ಮಯ ಬದುಕನ್ನು ನಡೆಸುವಂತಹ ಮಹತ್ವ ಪೂರ್ಣವಾದ ಆಶಯವನ್ನು ಸಂವಿಧಾನದ ಪೀಠಿಕೆಯಿಂದ ತಿಳಿಯಬಹುದಾಗಿದೆ ಅಂತಹ ಮಹತ್ವ ಪೂರ್ಣವಾದ ಅಂಶಗಳನ್ನು ಪ್ರತಿಯೊಬ್ಬರು ಓದುವ ಮೂಲಕ ತಿಳಿದುಕೊಂಡು ಮತ್ತೊಬ್ಬರಿಗೆ ತಿಳಿಸುವ ಮೂಲಕ ಸಂವಿಧಾನದ ಪೀಠಿಕೆಯನ್ನು ಪಾಲಿಸಬೇಕು ಮತ್ತು ಗೌರವಿಸಬೇಕು ಎಂದು ತಿಳಿಸಿದರು.

ತಹಶೀಲ್ದಾರ್ ಎಮ್.ವಿ ರೂಪರವರು ಭಾರತ ಸಂವಿಧಾನದ ಪೀಠಿಕೆಯ ಪ್ರಸ್ತಾವನೆಯನ್ನು ಭೋಧಿಸಿ ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ, ಸಮಭಾವದ ಪ್ರಜಾ ಸತತ್ಮಾಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ, ವಿಶ್ವಾಸ, ದರ್ಮಶ್ರದ್ದೆ ಮತ್ತು ಉಪಾಸನ ಸ್ವಾತಂತ್ರ್ಯ, ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ ಏಕತೆಯನ್ನು ಹಾಗೂ ಅಕಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃ ಭಾವನೆಯನ್ನು ವೃದ್ದಿಗೊಳಿಸಲು ಶ್ರದ್ದಪೂರ್ವಕ ಸಂಕಲ್ಪ ಮಾಡಿರುವುದಾಗಿ ನಮ್ಮ ಸಂವಿಧಾನ ಸಭೆಯಲ್ಲಿ 1949 ನೇ ಇಸವಿ ನವೆಂಬರ್ ತಿಂಗಳ 26 ನೇ ತಾರೀಖಿನ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿಸಿ ಅರ್ಪಿಸಿಕೊಂಡಿದ್ದವೆ ಎಂದು ಪ್ರತಿಜ್ಞಾ ವಿಧಿ ಭೋಧಿಸಿದರು.

ಸಂದರ್ಭದಲ್ಲಿ ಇ.ಓ. ಆರ್ ಪ್ರಕಾಶ್, ಪಿ.ಅರ್.ಡಿ ಎ.ಇ.ಇ ಕೆ ನಾಗನಗೌಡ, ಸಿ.ಪಿ.ಐ ವಸಂತ ವಿ ಅಸೊದೆ, ಪಿ.ಎಸ್.ಐ ಪಾಂಡುರಂಗಪ್ಪ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಈರಣ್ಣ, ಸ.ಪ್ರ.ಕಾ ಪ್ರಾಂಶುಪಾಲ ಸೂರಯ್ಯ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಮಾಲತಿ, ಪಶು ಇಲಾಖೆ ಸಹಾಯಕ ನಿರ್ದೇಶಕ ರಂಗಪ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಇಂದು ಹಿರಿಯ ನಾಗರಿಕರಿಗೆ ಕ್ರೀಡಾಕೂಟ

» ಚಿತ್ರದುರ್ಗ

ಜಿಲ್ಲಾಮಟ್ಟದಲ್ಲಿ ಅಕ್ಟೋಬರ್ 1ರಂದು ಹಮ್ಮಿಕೊಂಡಿರುವ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಇದೇ ಸೆಪ್ಟೆಂಬರ್ 20ರಂದು ಬೆಳಿಗ್ಗೆ 10ಕ್ಕೆ ಚಿತ್ರದುರ್ಗದ ಒನಕೆ ಓಬವ್ವ ಜಿಲ್ಲಾ ಕ್ರೀಡಾಂಗಣದಲ್ಲಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ಮೂರು ಗುಂಪುಗಳಲ್ಲಿ (60–69, 70–79, 80 ವರ್ಷ ಮೇಲ್ಪಟ್ಟವರು) ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತ ಹಿರಿಯ ನಾಗರಿಕರು ಸೆಪ್ಟೆಂಬರ್ 20ರಂದು ಬೆಳಿಗ್ಗೆ 9.30 ಗಂಟೆಗೆ ಹೆಸರು ನೋಂದಾಯಿಸಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಕೋರಿದೆ. ವಿವಿಧ ಕ್ರೀಡೆಗಳ ವಿವರ: 60–69 ವರ್ಷದ ಪುರುಷ ಮತ್ತು ಮಹಿಳೆಯರಿಗೆ 200 ಮೀ. ನಡಿಗೆ, ರಿಂಗ್‌ನ್ನು ಬಕೆಟ್‌ನಲ್ಲಿ ಎಸೆಯುವುದು, ಮ್ಯೂಜಿಕಲ್ ಚೇರ್, 70–79 ವಯಸ್ಸಿನವರಿಗೆ 100 ಮೀ. ನಡಿಗೆ, ರಿಂಗ್‌ನ್ನು ಬಕೆಟ್‌ನಲ್ಲಿ ಎಸೆಯುವುದು, ಮ್ಯೂಜಿಕಲ್ ಚೇರ್, 80 ವರ್ಷ ಮೇಲ್ಪಟ್ಟವರಿಗೆ 50 ಮೀ. ನಡಿಗೆ, ರಿಂಗ್‌ನ್ನು ಬಕೆಟ್‌ನಲ್ಲಿ ಎಸೆಯುವುದು, ಮ್ಯೂಜಿಕಲ್ ಚೇರ್ ಮತ್ತು 60 ವರ್ಷ ಮೇಲ್ಪಟ್ಟ ಎಲ್ಲ ಹಿರಿಯ ನಾಗರಿಕರಿಗೂ ಸಾಂಸ್ಕೃತಿಕ ಸ್ಪರ್ಧೆಗಳಾದ ಏಕ ಪಾತ್ರಾಭಿನಯ, ಗಾಯನ ಸ್ಪರ್ಧೆ, ಚಿತ್ರಕಲೆ ಆಯೋಜಿಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಜಿಲ್ಲಾ ಬಾಲಭವನ ಆವರಣ, ಸ್ಟೇಡಿಯಂ ಹತ್ತಿರ, ಚಿತ್ರದುರ್ಗ ದೂರವಾಣಿ ಸಂಖ್ಯೆ 08194–235284ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ ತಿಳಿಸಿದ್ದಾರೆ.

### ಸಹಾಯಧನಕ್ಕಾಗಿ ಅರ್ಜಿ

» ಚಿತ್ರದುರ್ಗ

2023–24 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, ವಿನೂತನ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳ ಸಹಾಯಧನ ಕಾರ್ಯಕ್ರಮದಡಿ ಸೋಲಾರ್ ಪಂಪ್‌ಸೆಟ್ ಹಾಗೂ ವಿವಿಧ ಯಂತ್ರೋಪಕರಣ ಖರೀದಿಸಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಸಾಮಾನ್ಯ ವರ್ಗದ ರೈತರು ಶೇ.40 ರಷ್ಟು ಹಾಗೂ ಪ.ಜಾತಿ ಮತ್ತು ಪ.ಪಂಗಡ, ಫಲಾನುಭವಿಗಳು ಶೇ. 50 ರಷ್ಟು ಸಹಾಯಧನ ಪಡೆಯಬಹುದು ಮತ್ತು 3 ಹೆಚ್.ಪಿ. ಸೋಲಾರ್ ಪಂಪ್‌ಸೆಟ್‌ಗಳಿಗೆ ರೂ.1.00 ಲಕ್ಷ, 5 ಹೆಚ್.ಪಿ. ಹಾಗೂ ಹೆಚ್ಚಿನ ಸಾಮರ್ಥ್ಯದ ಸೋಲಾರ್ ಪಂಪ್‌ಸೆಟ್‌ಗಳಿಗೆ ರೂ. 1.50 ಲಕ್ಷ ಸಹಾಯಧನ ಪಡೆಯಲು, ಹೊಸ ಪ್ರದೇಶ ವಿಸ್ತರಣೆ (ದಾಳಿಂಬೆ, ಡ್ರಾಗನ್ ಫ್ರೂಟ್ ಮತ್ತು ನುಗ್ಗೆ ಬೆಳೆಗಳಿಗೆ ಶೇ.40 ರಂತೆ 0.10 ಹೆ. ನಿಂದ ಗರಿಷ್ಟ 2.00 ಹೆ. ವರೆಗೆ ಸಹಾಯಧನ ನೀಡಲಾಗುವುದು),ಅಡಿಕೆಬೆಳೆಯಲ್ಲಿಕಾಳುಮೆಣಸು ಪ್ರದೇಶ ವಿಸ್ತರಣೆಗೆ 0.20 ಹೆ ನಿಂದ 4.00 ಹೆ.ವರೆಗೆ ಸಹಾಯಧನ ನೀಡಲಾಗುವುದು. ಅಡಿಕೆ ಬೆಳೆಯಲ್ಲಿ ಕಾಳುಮೆಣಸು ಪ್ರದೇಶ ವಿಸ್ತರಣೆಗೆ 0.20 ಹೆ ನಿಂದ 4.00 ಹೆ.ವರೆಗೆ ಸಹಾಯಧನ ನೀಡಲಾಗುವುದು. SMAM ತೋಟಗಾರಿಕೆಯಲ್ಲಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರು ಶೇ.40 ರಷ್ಟು ಹಾಗೂ ಪ.ಜಾತಿ ಮತ್ತು ಪ.ಪಂಗಡ, ಸಣ್ಣ ಮತ್ತು ಅತೀ ಸಣ್ಣ, ಮಹಿಳಾ ಫಲಾನುಭವಿಗಳು ಶೇ. 50 ರಷ್ಟು ಸಹಾಯಧನ ಪಡೆಯಬಹುದು. (ಗರಿಷ್ಟ ರೂ.1.25 ಲಕ್ಷಗಳು/ ಗರಿಷ್ಟ 5 ಸಂಖ್ಯೆಯ ಯಂತ್ರೋಪಕರಣಗಳನ್ನು ಖರೀದಿಸಲು) ಆಸಕ್ತ ರೈತ ಫಲಾನುಭವಿಗಳು ಪಹಣಿ, ಬೆಳೆದೃಢೀಕರಣ, ಚೆಕ್‌ಬಂದಿ, ಆಧಾರ್ ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಜಾತಿ ಪ್ರಮಾಣ ಪತ್ರ, ಇನ್ನು ಮುಂತಾದ ದಾಖಲೆಗಳನ್ನು ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು. ಗುರಿಗೆ ಅನುಗುಣವಾಗಿ ಮಾರ್ಗಸೂಚಿಯನುಸಾರ ಫಲಾನುಭವಿಗಳನ್ನು ಜೇಷ್ಠತಾ ಆಧಾರದ ಮೇರೆಗೆ ಸಹಾಯಧನಕ್ಕೆ ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ಜಿಪಂ), ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಹಾಗೂ ಮೊಳಕಾಲ್ಮೂರು ತಾಲ್ಲೂಕು / ಎಲ್ಲಾ ತಾಲ್ಲೂಕಿನ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು.

### ಕಾವೇರಿಗಾಗಿ ಕೇಂದ್ರ ಸಚಿವರನ್ನು ಭೇಟಿಯಾದ ತಮಿಳುನಾಡು ನಿಯೋಗ

ಕಾವೇರಿ ನೀರಿಗಾಗಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಅವರನ್ನು ತಮಿಳುನಾಡು ನಿಯೋಗ ಭೇಟಿಯಾಗಿದೆ. ಸಚಿವ ದೊರೈ ಮುರುಗನ್ ನೇತೃತ್ವದಲ್ಲಿ ತಮಿಳುನಾಡು ಸಂಸದರ ನಿಯೋಗ ಭೇಟಿಯಾಗಿದ್ದು ಅಫಾಒಂ ಆದೇಶಕ್ಕಿಂತ ಹೆಚ್ಚಿನ ನೀರು ಹರಿಸುವಂತೆ ಮನವಿ ಮಾಡಿದೆ.

### ಒಂಬತ್ತು ಇಂಚು ಜಾಗಕ್ಕೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯ


ಕೋಲಾರನಗರದ ಇದ್ರೀಸ್ ಸಾಬ್ ಬಡಾವಣೆಯಲ್ಲಿ ಒಂಬತ್ತು ಇಂಚು ಕಿಟಕಿ ಜಾಗಕ್ಕೆ ಶುರುವಾದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಮುಜುಮಿಲ್ ಪಾಷಾ ಕೊಲೆಯಾದ ದುರ್ದೈವಿ. ರೋಷನ್, ಜಮೀರ್, ನಬೀವುಲ್ಲ, ಫಿರ್ದೋಸ್ ಎಂಬುವರಿಂದ ಕೊಲೆ. ಬಂಧನದ ಭಯಕ್ಕೆ ಆರೋಪಿಗಳು ಕುಟುಂಬ ಸಮೇತ ಪರಾರಿಯಾಗಿದ್ದಾರೆ.

# ಕಲೆ ಮೂಲಕವೇ ಜಗತ್ತಿಗೆ ಹೊಸ ಶಕ್ತಿ ನೀಡಿದ ಮಹಾನ್ ತಪಸ್ವಿ ವಿಶ್ವಕರ್ಮ: ಶಾಸಕ ರಘುಮೂರ್ತಿ

» ಚಳ್ಳಕೆರೆ

ನಾಡಿನ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಚಿತ್ರಕಲೆಯ ಮೂಲಕ ಶಾಶ್ವತವಾಗಿ ಎಲ್ಲರಲ್ಲೂ ನೆಲೆಯೂರುವಂತೆ ಮಾಡಿದ ಮಹಾನ್ ತಪಸ್ವಿ ವಿಶ್ವಕರ್ಮರು ಎಂದೂ ಆದರ್ಶಪ್ರಾಯರು ಎಂದು ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ಅವರು, ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಮ್ಮಿಕೊಂಡಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೇವಲ ನಮ್ಮ ಭಾರತವರ್ಷ್ಟೇಯಲ್ಲ, ವಿದೇಶದಲ್ಲೂ ಸಹ ವಿಶ್ವಕರ್ಮರ ಸಾಧನೆಯ ಬಗ್ಗೆ ಮೆಚ್ಚುಗೆ ಇದೆ. ಇಂದು ವಿಶ್ವಕರ್ಮ ಸಮುದಾಯ ತಾಂತ್ರಿಕತೆಯ ಕಾರಣದಿಂದ ಹಿಂದೆ ಉಳಿದಿದ್ದರೂ ಈ ಸಮಾಜದ ಅಭಿವೃದ್ಧಿಗೆ ಸರ್ಕಾರ ಬದ್ದವಾಗಿದೆ. ವಿಶ್ವಕರ್ಮ ಬಂಧುಗಳು ತಮ್ಮ ಆರಾಧ್ಯದೈವ ವಿಶ್ವಕರ್ಮರ ಆದರ್ಶಗಳನ್ನು ರೂಢಿಸಿಕೊಂಡು ಸಮಾಜದ ಏಳಿಗಾಗಿ ಶ್ರಮಿಸಬೇಕು ಎಂದರು.



ಪ್ರಾಸ್ತಾವಿಕವಾಗಿ ಮಾತನಾಡಿದ ತಹಶೀಲ್ದಾರ್ ರೇಹಾನ್ ಪಾಷ, ಸರ್ಕಾರ ಸಮಾಜಕ್ಕೆ ಸೇವೆ ಸಲ್ಲಿಸಿದ ಅನೇಕ ಮಹಾನೀಯರನ್ನು ನೆನಪಿಸಿಕೊಳ್ಳುವ ಕಾರ್ಯಕ್ರಮವನ್ನಾಗಿ ವಿಶ್ವಕರ್ಮ ಜಯಂತಿ ಆಚರಿಸುತ್ತಿದೆ. ವಿಶ್ವಕರ್ಮ ಸಮಾಜದ ಬಂಧುಗಳೂ ಸೇರಿದಂತೆ ಇಡೀ ಸಮಾಜಕ್ಕೆ ಇವರ ಸಾಧನೆಯ ಬಗ್ಗೆ ಮೆಚ್ಚಿಗೆ ಇದೆ ಎಂದರು.

ವಿಶ್ವಕರ್ಮ ಮಹರ್ಷಿಗಳ ಬಗ್ಗೆ ಮಾತನಾಡಿದ ವಕೀಲೆ ಸುಮಲತ, ಮಹಿಳಾ ಘಟಕದ ಅಧ್ಯಕ್ಷೆ ಕಮಲಮ್ಮ, ವಿಶ್ವಕರ್ಮರ ಬಗ್ಗೆ ಏನು ತಿಳಿದಿಲ್ಲವೆಂದು ಹೇಳಿದ ತಹಶೀಲ್ದಾರ್ ರೇಹಾನ್ ಪಾಷವರನ್ನು ಸಭೆಯಲ್ಲೇ ತಮ್ಮ ಅಸಮದಾನ ವ್ಯಕ್ತಪಡಿಸಿದರು. ತಹಶೀಲ್ದಾರ್ ನಾನು ಆ ಅರ್ಥದಲ್ಲಿ ಹೇಳಿಲ್ಲವೆಂದು ಸಮಜಾಯಿಸಿ ನೀಡಿದರು. ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ ಜಯವೀರಚಾರಿ ಮಾತನಾಡಿ, ಶಾಸಕ ಟಿ.ರಘುಮೂರ್ತಿಯವರು ಎಲ್ಲಾ ಸಮುದಾಯಕ್ಕೂ ಸಾಕಷ್ಟು ಸೌಕರ್ಯ ನೀಡಿದ್ಧಾರೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಸೌಲಭ್ಯವನ್ನು ವಿಶ್ವಕರ್ಮ ಸಮಾಜದ ಬಂಧುಗಳಿಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ವೆಂಕಟೇಶಚಾರ್, ನಗರಸಭಾ ಸದಸ್ಯರಾದ ಕವಿತಾಬೋರಯ್ಯ, ಸುಜಾಯಪಾಲಯ್ಯ, ಸುಮಾಭರಮಣ್ಣ, ಕೆ.ವೀರಭದ್ರಪ್ಪ, ಟಿ.ಮಲ್ಲಿಕಾರ್ಜುನ್, ಡಿವೈಎಸ್ಪಿ ಟಿ.ಬಿ.ರಾಜಣ್ಣ, ಪೌರಾಯುಕ್ತ ಸಿ.ಚಂದ್ರಪ್ಪ, ಸರಸ್ವತಿ, ಶ್ರೀನಿವಾಸ್‌ಚಾರ್ ಮುಂತಾದವರು ಉಪಸ್ಥಿತರಿದ್ದರು.

# ಸಹಕಾರದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಅಗತ್ಯ

» ಚಿತ್ರದುರ್ಗ

ಸಹಕಾರದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದರಿಂದ ವಿದ್ಯಾರ್ಥಿ ದೆಸೆಯಲ್ಲಿಯೇ ಸಹಕಾರ ಎಂದರೆ ಏನು ಎಂಬುದರ ಬಗ್ಗೆ ಅರಿವು ಮೂಡುತ್ತದೆ ಎಂದು ಮಹಾರಾಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜಯಣ್ಣ ಟಿ. ತಿಳಿಸಿದರು.

ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಚಿತ್ರದುರ್ಗ ಹಾಗೂ ಮಹಾರಾಣಿ ಸಂಯುಕ್ತ ಪದವಿ ಪೂರ್ವ ಕಾಲೇಜು,ಚಿತ್ರದುರ್ಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಗರದ ಮಹಾರಾಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸಹಕಾರದ ಬಗ್ಗೆ ಪ್ರಬಂಧ ಸ್ಪರ್ಧೆ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡಿದರು.

ಸಹಕಾರದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದರಿಂದ ವಿದ್ಯಾರ್ಥಿ ದೆಸೆಯಲ್ಲಿಯೇ ಸಹಕಾರ ಎಂದರೆ ಏನು ಸಹಕಾರ ಕ್ಷೇತ್ರದಿಂದ ಸಹಕಾರ ಬ್ಯಾಂಕ್ ಮತ್ತು ಸಂಘ ಸಂಸ್ಥೆಗಳಿಂದ ಸಿಗುವ ಸೌಲಭ್ಯಗಳು ಯಾವುವು ಹಾಗೂ ಇದರಿಂದ ರೈತರಿಗೆ ಸಿಗುವ ಸೌಲಭ್ಯ ಏನು ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕೆಲಸವಾಗಬೇಕಾಗಿದೆ ಎಂದು ತಿಳಿಸಿದರು.

ಸಹಕಾರ ರತ್ನ ಪುರಸ್ಕೃತರು ಹಾಗೂ ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾದ ಜಿಂಕಲು ಬಸವರಾಜ್ ಮಾತನಾಡಿ ನಮ್ಮ ಜಿಲ್ಲಾ ಸಹಕಾರ ಯೂನಿಯನ್ ವತಿಯಿಂದ ಪ್ರತಿ ವರ್ಷವು ಪ್ರಬಂಧ ಮತ್ತು ಚರ್ಚಾಸ್ಪರ್ಧೆಯನ್ನು ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳುತ್ತಿದ್ದು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ದೆಸೆಯಲ್ಲಿ ಸಹಕಾರ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಇಂತಹ ಸ್ಪರ್ಧೆಗಳನ್ನು ನಮ್ಮ ಯೂನಿಯನ್ ವತಿಯಿಂದ ನಡೆಸಲಾಗುತ್ತಿದೆ. ಆಡು ಮುಟ್ಟದ ಸೊಪ್ಪಿಲ್ಲ , ಸಹಕಾರ ಕ್ಷೇತ್ರವಿಲ್ಲದ ಕ್ಷೇತ್ರವೇ ಇಲ್ಲ ಎಂಬಂತೆ ಸಹಕಾರ ಬಗ್ಗೆ ತಾವುಗಳು ಹೆಚ್ಚಿನ ಮಾಹಿತಿ ತಿಳಿದುಕೊಳ್ಳಬೇಕು, ಸಹಕಾರ ಬ್ಯಾಂಕ್ ಮತ್ತು ಸಹಕಾರ ಸಂಘಗಳಿಂದ ಸಿಗುವ ಸಾಲ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ತಮ್ಮ ಗ್ರಾಮೀಣ ಭಾಗಗಳಲ್ಲಿ ರೈತರಿಗೆ ವಿದ್ಯಾರ್ಥಿಗಳೇ ಮಾಹಿತಿ ನೀಡಬೇಕು ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಹೆಚ್.ಎನ್. ತಿಪ್ಪೇಸ್ವಾಮಿ, , ಉಪಸ್ಥಿತರಿದ್ದರು. ಮಹಾರಾಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಮುಖ್ಯೋಪದ್ಯಾಯರಾದ ಆರ್.ಚನ್ನಪ್ಪ ಕೋಟೆಹಾಳ್, ಭೀಮಪ್ಪನಾಯಕ ಪ್ರೌಢಶಾಲೆಯ ಮುಖ್ಯೋಪದ್ಯಾಯರಾದ ಎ.ಎನ್. ರಾಜೇಶೇಖರ್, ಹಾಗೂ ಪ್ರಬಂಧ ಸ್ಪರ್ಧೆ ಮೌಲ್ಯಮಾಪಕರಾಗಿ ಎಸ್.ಪಿ. ರವಿಕುಮಾರ್,ಟಿ. ಆರ್.ವೆಂಕಟೇಶ್, ಹಾಗೂ ಚರ್ಚಾಸ್ಪರ್ಧೆ ತೀರ್ಪುಗಾರರಾಗಿ ಶ್ರೀಮತಿ ಎಸ್.ಮಾಲತಿ, , ಶ್ರೀಮತಿ ಎಸ್.ಉಮಾದೇವಿ, ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

ಚರ್ಚಾ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ಈ ವಿದ್ಯಾರ್ಥಿಗಳು ವಿಜೇತರಾಗಿದ್ದು, ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಣೆ ಮಾಡಲಾಯಿತು.

**ಚರ್ಚಾಸ್ಪರ್ಧೆಯಲ್ಲಿ ವಿಜೇತರು ಪದವಿ ಪೂರ್ವ ಕಾಲೇಜು:** ಸೌಂದರ್ಯ ಬಿ.ಟಿ., ಪ್ರಥಮ ಪಿ.ಯು.ಸಿ., (ಪರವಾಗಿ)– ಪ್ರಥಮ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಳ್ಳಕೆರೆ ಪವನ, ದ್ವಿತೀಯ ಪ್ರಥಮ ಪಿ.ಯು.ಸಿ., – ಪ್ರಥಮ (ವಿರೋಧವಾಗಿ). ಸರ್ಕಾರಿ ಪದವಿ ಪೂರ್ವ ಕಾಲೇಜು, ಅನ್ನೇಹಾಳ್ ಜಂಪಣ್ಣನಹಟ್ಟಿ, ಚಿತ್ರದುರ್ಗ ತಾಲ್ಲೂಕು, ಅನುಪಮ ಕೆ.ಎಸ್. ಪ್ರಥಮ ಪಿ.ಯು.ಸಿ.– ದ್ವಿತೀಯ (ಪರವಾಗಿ) ಕಂಪಳರಂಗಸ್ವಾಮಿ ಪದವಿ ಪೂರ್ವ ಕಾಲೇಜು, ಚಿತ್ರದುರ್ಗತನುಜ ಹೆಚ್.ಪ್ರಥಮ ಪಿ.ಯು.ಸಿ.– ದ್ವಿತೀಯ (ವಿರೋಧವಾಗಿ) ಕಂಪಳರಂಗಸ್ವಾಮಿ ಪದವಿ ಪೂರ್ವ ಕಾಲೇಜು,

**ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರು ಪ್ರೌಢಶಾಲೆ:** ಕುಮಾರಿ ॥ ತನು ಎಂ. 10ನೇ ತರಗತಿ, ಡಿ.ವಿ.ಎಸ್.ಪ್ರೌಢಶಾಲೆ, ಭರಮಸಾಗರ – ಪ್ರಥಮ ಸ್ಥಾನ ಕುಮಾರಿ ॥ ಆಲಿಯಾ ಪರ್ವಿನಾ, ಎಸ್. 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಕುರುಬರಹಳ್ಳಿ – ದ್ವಿತೀಯ ಸ್ಥಾನ, ಕುಮಾರಿ॥ ನಯನ ಟಿ. 10ನೇ ತರಗತಿ, ಎ.ಭೀಮಪ್ಪನಾಯಕ ಪ್ರೌಢಶಾಲೆ, ಚಿತ್ರದುರ್ಗ– ತೃತೀಯ ಸ್ಥಾನ ಪಡೆದಿದ್ದಾರೆ.

# ಬಿಚ್ಚುಗತ್ತಿ ಭರಮಣ್ಣನಾಯಕರ ಪಟ್ಟಾಭಿಷೇಕ ಸ್ಮರಣೋತ್ಸವ



» ಚಿತ್ರದುರ್ಗ

ಚಿತ್ರದುರ್ಗದ ಕೋಟೆಯನ್ನು 211 ವರ್ಷಗಳ ಕಾಲ ಆಳ್ವಿಕೆ ನಡೆಸಿದ 11 ಪಾಳೆಯಗಾರರಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕರು ಪ್ರಮುಖವಾಗಿ ಗುರುತಿಸಿಕೊಂಡಿದ್ದಾರೆಂದು ಸಾಹಿತಿ ಮೃತ್ಯುಂಜಯಪ್ಪ ಹೇಳಿದರು.

ಬಿಚ್ಚುಗತ್ತಿ ಭರಮಣ್ಣನಾಯಕರ 333 ನೇ ಪಟ್ಟಾಭಿಷೇಕ ಮಹೋತ್ಸವ ಪ್ರಯುಕ್ತ ಉಚ್ಚಂಗೆಲ್ಲಮ್ಮ ದೇವಸ್ಥಾನದಲ್ಲಿ ಗುರುವಾರ ನಡೆದ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತ ಬಿಚ್ಚುಗತ್ತಿ ಭರಮಣ್ಣನಾಯಕರು ಕೆರೆ, ಕಟ್ಟೆ, ಗುಡಿ, ಗೋಪುರ, ಮಠಗಳನ್ನು ಕಟ್ಟಿಸಿದ್ದಾರೆ. ಐತಿಹಾಸಿಕ ಚಿತ್ರದುರ್ಗದ ಕೋಟೆ ವಿಶ್ವಭೂಪಟದಲ್ಲಿ ಸೇರಬೇಕು. ಬಾದಾಮಿ, ವಿಜಯನಗರ ಇವುಗಳೆಲ್ಲಾ ಸೇರಿರುವುದರಿಂದ ಉತ್ಖನನ ಆಗಬೇಕು. ಇದರಿಂದ ಮುಂದಿನ ಪೀಳಿಗೆಗೆ ಪಾಳೆಯಗಾರರ ಇತಿಹಾಸವನ್ನು ತಿಳಿಸಿದಂತಾಗುತ್ತದೆ. ತ.ರಾ.ಸು. ತಮ್ಮ ಕಾದಂಬರಿಗಳಲ್ಲಿ ಚಿತ್ರದುರ್ಗದ ಕೋಟೆಯ ಮೇಲೆ ಅಪಾರವಾದ ಬೆಳಕು ಚೆಲ್ಲಿದ್ದಾರೆಂದರು. ಮದಕರಿನಾಯಕ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಡಿ.ಗೋಪಾಲಸ್ವಾಮಿ ನಾಯಕ ಮಾತನಾಡಿ ಬಿಚ್ಚುಗತ್ತಿ ಭರಮಣ್ಣನಾಯಕರು ಯದ್ದದಲ್ಲಿ ತೆಗೆದ ಕತ್ತಿಯನ್ನು ಮತ್ತೆ ಒಳಗೆ ಇರಿಸದೆ ಶತ್ರುಗಳ ವಿರುದ್ದ ಹೋರಾಡಿದರು. ಅಣಜಿ ಕೋಟೆ, ನೆಲ್ಲಿಕಾಯಿ ಸಿದ್ದಪ್ಪನಬೆಟ್ಟ, ಆಲೂರು ಕೋಟೆ, ಆನೆಬಾಗಿಲು, ಸಂತೆಹೊಂಡ, ಹಿಡಂಬೇಶ್ವರಿ, ಹನುಮನ ಬಾಗಿಲು, ಮುರುಘಾಮಠ, ಒನಕೆ ಓಬವ್ವನ ಕಿಂಡಿ, ಅರಸನ ಕೆರೆ, ಭರಮಸಾಗರ ಕೆರೆ ಮುರುಘಾಮಠದ ಎದುರು ಹಾಗೂ ಹಿಂಭಾಗದಲ್ಲಿರುವ ಕೆರೆಗಳನ್ನು ಕಟ್ಟಿಸಿದರು. ಗುಡಿ ಗೋಪುರ, ಗತ ವೈಭವದ ದೇವಸ್ಥಾನಗಳನ್ನು ಕಟ್ಟಿಸಿ ಚಿತ್ರದುರ್ಗದ ಪಾಳೆಯಗಾರರಲ್ಲಿ ಯಾರೂ ಕೂಡ ಮಾಡದಂತೆ ಅಭಿವೃದ್ದಿ ಕೆಲಸಗಳನ್ನು ಮಾಡಿ ಅಜರಾಮರವಾಗಿ ಉಳಿದಿದ್ದಾರೆಂದು ಗುಣಗಾನ ಮಾಡಿದರು.ರಾಜಾವೀರ ಮದಕರಿನಾಯಕ ಮಾತನಾಡುತ್ತ ಯುವರಾಜನಾಗಿದ್ದ ಬಿಚ್ಚುಗತ್ತಿ ಭರಮಣ್ಣನಾಯಕನನ್ನು ಕೆಲವರು ದನ ಕಾಯುವ ಹುಡುಗ ಎಂದು ಅಪ ಪ್ರಚಾರ ಮಾಡಿದ್ದುಂಟು. ಹಾಗಾಗಿ ದಳವಾಯಿ ಮುದ್ದಣ್ಣ ಭರಮಣ್ಣನಾಯಕನಿಗೆ ಪಟ್ಟ ಕಟ್ಟಲಿಲ್ಲ. ಚಿತ್ರನಾಯಕ ಕಾಮಗೇತಿ ವಂಶಸ್ಥರಾಗಿದ್ದರು. ಚಿತ್ರದುರ್ಗದ ಇತಿಹಾಸದಲ್ಲಿ ಬಿಚ್ಚುಗತ್ತಿ ಭರಮಣ್ಣನಾಯಕ ಮಾಡಿದಷ್ಟು ಜನೋಪಕಾರಿ ಕೆಲಸಗಳು ಬೇರೆ ಯಾರಿಂದಲು ಆಗಿಲ್ಲ. 1512 ರಲ್ಲಿ ಚಿತ್ರದುರ್ಗದಲ್ಲಿ ಆಳ್ವಿಕೆ ಆರಂಭಗೊಂಡಿತು. ಚಿತ್ರದುರ್ಗ ಎಂದರೆ ನಾಯಕರ ರಾಜಧಾನಿ ಎಂದು ನೆನಪಿಸಿಕೊಂಡರು. ಕಿರಣ್‌ಕುಮಾರ್, ನಿವೃತ್ತ ರೈಲ್ವೆ ಅಧಿಕಾರಿ ರಾಜಶೇಖರಪ್ಪ ಸಿ.ಎಂ. ಕೃಷ್ಣಮೂರ್ತಿ, ಸುರೇಶ್, ರಘು ಬಿ. ಅಜಯ್‌ಮದಕರಿ, ಗಿರಿಸಾಗರ್ ಮದಕರಿ, ಟಿ.ರಾಜಣ್ಣ, ಕೃಷ್ಣಮೂರ್ತಿ, ಪವನ್, ನಾಗರಾಜ್, ಮಂಜುನಾಥ್ ಬಿ.ಎನ್, ಕೆ.ಟಿ.ನಾಗರಾಜ್ ಇನ್ನು ಅನೇಕರು ಈ ಸಂದರ್ಭದಲ್ಲಿದ್ದರು.ಬಿಚ್ಚುಗತ್ತಿ ಭರಮಣ್ಣನಾಯಕನ 333 ಪಟ್ಟಾಭಿಷೇಕ ಮಹೋತ್ಸವದ ನೆನಪಿಗಾಗಿ ಸಿಹಿ ಹಂಚಲಾಯಿತು.

### ಸರ್ಕಾರದ ನಡೆ ರೈತರನ್ನು ಇಕ್ಕಟಿಗೆ ಸಿಲುಕಿಸಿದೆ: ಬೊಮ್ಮಾಯಿ

ತಮಿಳುನಾಡಿಗೆ ಕಾವೇರಿ ನೀರು ಬಿಡಲು ಅಫಾಒಂ ಆದೇಶ ವಿಚಾರ ಸಂಬಂಧ ದೆಹಲಿಗೆ ಸಂಸದರ ನಿಯೋಗ ತೆರಳಲು ಏನೂ ಸಮಸ್ಯೆ ಇಲ್ಲ ಎಂದು ಬೆಂಗಳೂರಿನಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು. ರಾಜ್ಯ ಸರ್ಕಾರ ಈ ಬಗ್ಗೆ ಆಸಕ್ತಿವಹಿಸಬೇಕು. ನನ್ನ ಸಲಹೆ ಇಕ್ಕಟಿಗೆ ಸಿಲುಕಿಸಿದೆ ಎಂದು ಡಿಕೆಶಿ ಹೇಳಿದ್ದಾರೆ. ರಾಜ್ಯ ಸರ್ಕಾರದ ನಡೆ ರೈತರನ್ನು ಇಕ್ಕಟಿಗೆ ಸಿಲುಕಿಸಿದೆ. ಸರ್ಕಾರ ತಾನು ಸಲ್ಲಿಸಿರುವ ಅಫಿಡವಿಟ್‌ಗೆ ಬದ್ಧರಾಗಿರಬೇಕಲ್ವಾ? ಸರ್ಕಾರದಲ್ಲಿ ಕೆಲಸ ಮಾಡುವವರಿಗೆ ಮಾಹಿತಿ, ಜವಾಬ್ದಾರಿ ಇರಬೇಕು. ಡಿಸಿಎಂ ಏನೋ ಮಾತನಾಡಬೇಕು ಅಂತಷ್ಟೇ ಹೇಳಿಕೆ ನೀಡ್ತಾರೆ. ತಮಿಳುನಾಡಿನಂತೆ ವಸ್ತುಸ್ಥಿತಿ ಹೇಳಲು ನಾವು ಯಾವಾಗ ಕಲಿಯುತ್ತೇವೋ, ತಮಿಳುನಾಡಿನ ಡ್ಯಾಮ್‌ಗಳ ಬಗ್ಗೆ ನಮ್ಮ ವಕೀಲರು ಮಾತನಾಡಲ್ವೋ ಎಂದರು.

## ಪ್ರಮುಖ ಸುದ್ದಿ

# ಅ.1ರಂದು ನೂತನ ಶಾಸಕ, ಸಚಿವರಿಗೆ ಅಭಿನಂದನೆ

» ಚಳ್ಳಕೆರೆ

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸಮಸ್ತ ಮಾದಿಗ ಸಮುದಾಯದ ಎಲ್ಲಾ ಪಂಗಡಗಳು ಸಂಘಟಿತರಾಗಿ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಬೇಕಾಗಿದೆ. ಚಿತ್ರದುರ್ಗ ಲೋಕಸಭೆಗೆ ಸ್ಥಳೀಯ ಅಭ್ಯರ್ಥಿಗೆ ಮೊದಲ ಆದ್ಯತೆ ನೀಡಬೇಕು. ಜನಾಂಗದ ಸಂಘಟನೆಗೆ ಯಾರೂ ಶಕ್ತಿ ತುಂಬುತ್ತಾರೋ ಅಂತಹವರ ಆಯ್ಕೆ ಸೂಕ್ತ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೌಳೂರು ಪ್ರಕಾಶ್ ತಿಳಿಸಿದರು.

ಅವರು, ನಗರದ ಪ್ರವಾಸಿಮಂದಿರದಲ್ಲಿ ಕರ್ನಾಟಕ ಮಾದಿಗ ಯುವ ಸೇನೆ, ಮಾದಿಗ ದಂಡೋರ, , ಮಾದಿಗ ಮಹಾಸಭಾ ಮತ್ತು ಮಾದಿಗ ಸಮುದಾಯದ ವಿವಿಧ ಸಂಘಟನೆಗಳು ಅ.1ರಂದು ನೂತನವಾಗಿ ಆಯ್ಕೆಯಾದ ಶಾಸಕ, ಸಚಿವರಿಗೆ ಸಮುದಾಯದ ವತಿಯಿಂದ ನಗರದ ಗುರುರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿರುವ ಅಭಿನಂದನಾ ಕಾರ್ಯಕ್ರಮ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.



ಮಾದಿಗ ದಂಡೋರದ ಜಿಲ್ಲಾಧ್ಯಕ್ಷ ದ್ಯಾವರನಹಳ್ಳಿ ತಿಪ್ಪೇಸ್ವಾಮಿ ಮಾತನಾಡಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರ ಪರಿಶಿಷ್ಟ ಜಾತಿ ಮೀಸಲಾತಿ ಪಡೆದ ನಂತರ ಹೊರಗಿನಿಂದ ಬಂದ ಅಭ್ಯರ್ಥಿಗಳೇ ಸಂಸದರಾಗಿ ಆಯ್ಕೆಯಾಗುತ್ತಿದ್ದಾರೆ. ನೂರಾರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಥಳೀಯ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಿದರೆ ಪಕ್ಷದ ಭೇದ ಮರೆತು ಸಮಸ್ತ ಮಾದಿಗ ಸಮುದಾಯ ಅಭ್ಯರ್ಥಿಪರವಾಗಿ ಕೆಲಸ ಮಾಡಲಿದೆ ಎಂದರು.

ಮಾದಿಗ ಸಮುದಾಯದ ಯುವ ಮುಖಂಡ ಚನ್ನಮ್ಮನಾಗತಿಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿ.ಬಿ.ಆನಂದಕುಮಾರ್ ಮಾತನಾಡಿ, ಕಳೆದ ಹಲವಾರು ದಶಕಗಳಿಂದ ಮಾದಿಗ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷ ಉತ್ತಮ ಯೋಜನೆಗಳ ಮೂಲಕ ಶಕ್ತಿ ತುಂಬುತ್ತಾ ಬಂದಿದೆ. ರಾಜ್ಯವೂ ಸೇರಿದಂತೆ ದೇಶದ ಇತರೆ ರಾಜ್ಯಗಳಲ್ಲಿ ಮಾದಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ನಮ್ಮ ಸಮುದಾಯದ ಅಭ್ಯರ್ಥಿಗಳು ಆಯ್ಕೆಯಾಗಲು ಅವಕಾಶ ಮಾಡಿಕೊಡಲಾಗಿದೆ. ಇಡೀ ಸಮುದಾಯ ಸಂಘಟಿತವಾಗಿ ಒಮ್ಮನಸ್ಸಿನಿಂದ ಸಮುದಾಯದ ಅಭ್ಯರ್ಥಿಯನ್ನು ಆಯ್ಕೆ ಮಾಡಿದರೆ ಗೆಲುವು ಸುಲಭವಾಗುತ್ತದೆ. ಅ.1ರಂದು ದೊಡ್ಡಪ್ರಮಾಣದಲ್ಲಿ ಸಮಸ್ತ ಮಾದಿಗ ಸಮುದಾಯದ ಬಂಧುಗಳು ಸೇರಿ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಈ ಕಾರ್ಯಕ್ರಮ ಯಶಸ್ವಿಗೊಳಿಸಿದರೆ ಮಾತ್ರ ನಮ್ಮ ಮುಂದಿನ ರಾಜಕೀಯ ಭವಿಷ್ಯ ಉಜ್ವಲವಾಗುತ್ತದೆ ಎಂದರು.

ಪೂರ್ವಬಾವಿ ಸಭೆ ನಡೆಯುವ ಸಂದರ್ಭದಲ್ಲಿ ಆಗಮಿಸಿದ ಕಾಂಗ್ರೆಸ್ ಕೆಪಿಸಿಸಿ ಸದಸ್ಯ ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ, ಬಾರಿ ಪ್ರಮಾಣದಲ್ಲಿ ಸಮುದಾಯದ ಯುವಕರು ಇಲ್ಲಿ ಸೇರಿ ಅಭಿನಂದನಾ ಸಮಾರಂಭದ ಬಗ್ಗೆ ಚರ್ಚೆ ನಡೆಸಿರುವುದು ಸಂತಸತಂದಿದೆ.ಮುಂಬರುವ ಲೋಕಸಭಾ ಚುನಾವಣೆಯ ಹಿತದೃಷ್ಠಿಯಲ್ಲಿ ಅಭಿನಂದನಾ ಸಮಾರಂಭದ ಮೂಲಕ ಈ ಭಾಗದ ಸಮಸ್ತ ಮಾದಿಗ ಸಮುದಾಯ ಪಕ್ಷಬೇದ ಮರೆತು ಅಭ್ಯರ್ಥಿಯ ಗೆಲುವಿಗೆ ಸಂಕಲ್ಪ ಮಾಡಬೇಕಿದೆ. ಕಾಂಗ್ರೆಸ್ ಪಕ್ಷದ ರಾಜ್ಯಮುಖಂಡರಿಗೆ ಇಲ್ಲಿನ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಅ.1ರ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜಕೀಯ ಕ್ಷೇತ್ರದಲ್ಲೂ ಸಹ ಮಾದಿಗ ಸಮುದಾಯವನ್ನು ಅಲಕ್ಷಿಸಬಾರದು ಎಂಬ ಸಂದೇಶವನ್ನು ನೀಡಬೇಕು ಎಂದರು. ಪೂರ್ವಬಾವಿ ಸಭೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಎಚ್.ರವಿಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ನಾಗರಾಜು, ಆರ್.ಕಾಂತರಾಜು, ಮಹಂತೇಶ್, ಕರಿಯಪ್ಪ, ತಿಮ್ಮರಾಜು, ಹನುಮಂತಪ್ಪ, ರಮೇಶ್, ರಾಮಾಂಜನೇಯ, ಕಾಡಪ್ಪ, ಸಂಗಮೇಶ್, ಆರ್.ಪ್ರಸನ್ನಕುಮಾರ್, ಎಂ.ಚೇತನ್‌ಕುಮಾರ್ ಮುಂತಾದವರು ಭಾಗವಹಿಸಿದ್ದರು.

## ಫಾಸ್ಟ್ ನ್ಯೂಸ್

### 5 ಗ್ಯಾರಂಟಿಗಳು ಕಾಂಗ್ರೆಸ್ ಸರ್ಕಾರಕ್ಕೆ ಶ್ರೀರಕ್ಷೆ: ಅನ್ವರ್‌ಸಾಬ್



» ಚಳ್ಳಕೆರೆ

ಕಳೆದ ನಾಲ್ಕು ತಿಂಗಳುಗಳಿಂದ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜನಪರ ಆಡಳಿತ ನೀಡುತ್ತಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನಗಳಿಸಲಿದೆ ಎಂದು ಕರ್ನಾಟಕ ವಕ್ಫ್‌ಬೋರ್ಡ್ ರಾಜ್ಯಾಧ್ಯಕ್ಷ ಕೆ.ಅನ್ವರ್‌ಸಾಬ್ ತಿಳಿಸಿದರು. ಅವರು, ಬಳ್ಳಾರಿಯಿಂದ ಬೆಂಗಳೂರಿಗೆ ಪ್ರಯಾಣಿಸುವ ಸಂದರ್ಭದಲ್ಲಿ ನಗರದ ಹೊರವಲಯದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ರಾಜಕೀಯ ಸ್ಥಾನಮಾನಗಳು ಹೆಚ್ಚು ಚರ್ಚೆಗೆ ಗುರಿಯಾಗಿವೆ. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಬರುವಂತಹ ವಿವಿಧ ರಾಜಕೀಯ ಪಕ್ಷದ ಮುಖಂಡರನ್ನು ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಪಕ್ಷಕ್ಕೆ ಕರೆತರುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಪಕ್ಷ ಸೇರ್ಪಡೆ ಬಗ್ಗೆ ಟೀಕೆ ಮಾಡುತ್ತಾರೆ. ಆದರೆ, 2019ರಲ್ಲಿ ಬಿಜೆಪಿಯವರು ಮಾಡಿದ ಶಾಸಕರ ಪಕ್ಷಾಂತರವನ್ನು ಅವರು ಮರೆಮಾಚುತ್ತಾರೆ. ಒಟ್ಟಿನಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಯಾವುದೇ ರೀತಿಯ ಸಮಸ್ಯೆಗೆ ಒಳಗಾಗದೆ ಐದು ವರ್ಷದ ಆಡಳಿತವನ್ನು ಪೂರೈಸಲಿದೆ. ಪಕ್ಷದ ಐದು ಗ್ಯಾರಂಟಿಗಳ ಈಡೇರಿಕೆಗೆ ಸರ್ಕಾರ ಬದ್ಧವಾಗಿದೆ ಎಂದರು. ರಾಜ್ಯ ಅಲ್ಪಸಂಖ್ಯಾತ ಘಟಕದ ಸಂಘಟನಾ ಕಾರ್ಯದರ್ಶಿ ಬಿ.ಫರೀದ್‌ಖಾನ್, ಮಾಜಿ ಪುರಸಭಾ ಸದಸ್ಯ ಎಸ್.ಮುಜೀಬ್, ಅನ್ವರ್ ಮಾಸ್ಟರ್, ಇಸ್ಮಾಯಿಲ್, ಕಮ್ರ್‌ರೋಜ್, ಕಲೀಂವುಲ್ಲಾ, ಕಲೀಂ ಮುಂತಾದವರು ಉಪಸ್ಥಿತರಿದ್ದರು.

### ನಾರ್ಮಲ್ ಡೆಲಿವರಿಗೆ ಮೊದಲ ಆದ್ಯತೆ: ಮಲ್ಲಿಕಾರ್ಜುನ್ ಕೀರ್ತಿ

» ಮೊದಲ ಪುಟದಿಂದ

ಪ್ರಸೂತಿ ಹಾಗೂ ಸ್ತ್ರೀರೋಗ, ಬಂಜೆತನ ನಿವಾರಣೆಯಲ್ಲಿ ಡಾ.ಮಲ್ಲಿಕಾರ್ಜುನ್ ಕೀರ್ತಿ ಪರಿಣಿತಿ ಪಡೆದಿದ್ದಾರೆ.ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ಚಿಕಿತ್ಸೆ ನೀಡುತ್ತಿರುವುದು ಮಹಿಳೆಯರಲ್ಲಿ ಸುರಕ್ಷಿತೆಯ ಹೊತೆ ಮಹಿಳೆಯರಲ್ಲಿ ವಿಶ್ವಾಸವನ್ನು ಮೂಡಿಸಿದೆ.ವಿ.ಪಿ. ಬಡಾವಣೆಯಲ್ಲಿದ್ದ ಉದಯ ನರ್ಸಿಂಗ್ ಹೋಂ ಈಗ ಕೀರ್ತಿ ಆಸ್ಪತ್ರೆಯಾಗಿ ರೂಪಾಂತರಗೊಂಡಿದೆ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ಅತ್ಯುತ್ತಮ ಗುಣಮಟ್ಟದ ಸೇವೆ ಸಲ್ಲಿಸು ತ್ತಿದ್ದಾರೆ.

#### ನಾರ್ಮಲ್ ಹೆರಿಗೆಗೆ ನಮ್ಮ ಮೊದಲ ಆದ್ಯತೆ

ನಮ್ಮ ಆಸ್ಪತ್ರೆಯಲ್ಲಿ ಆರಂಭದಿಂದ ಕೂಡ ನಾರ್ಮಲ್ ಡೆಲಿವರಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ನಮಗೆ ಮಹಿಳೆಯರ ಆರೋಗ್ಯ ಮುಖ್ಯವಾಗಿದೆ. ಕೀರ್ತಿ ಆಸ್ಪತ್ರೆ ಮೂಲ ಉದ್ದೇಶ ನಾರ್ಮಲ್ ಹೆರಿಗೆ ಮಾಡುವುದಾಗಿದೆ. ಗರ್ಭಿಣಿ ಸ್ಥಿತಿ ನೋಡಿಕೊಂಡು ಅವಶ್ಯಕತೆ ಇದ್ದರೆ ಮಾತ್ರ ಸಿಜೇರಿಯನ್ ಮಾಡುತ್ತೇವೆ. . ಸರ್ಜರಿ ಅಗತ್ಯವಿದ್ದಾಗಲೂ ಲ್ಯಾಪ್ರೋಸ್ಕೋಪಿಕ್‌ನಲ್ಲಿ ಮಾಡುತ್ತೇವೆ. ಇದರಿಂದ ಆಸ್ಪತ್ರೆಯಲ್ಲಿ ತಂಗುವ ಸಮಯ, ಗುಣ ಮುಖರಾಗುವ ಸಮಯದ ಪ್ರಮಾಣ ತುಂಬಾ ಕಡಿಮೆ ಇರುತ್ತದೆ ಎನ್ನುತ್ತಾರೆ" ಡಾ.ಮಲ್ಲಿಕಾರ್ಜುನ್ ಕೀರ್ತಿ, ಲ್ಯಾಪ್ರೋಸ್ಕೋಪಿಕ್ ಸರ್ಜರಿಗಳನ್ನು ತುಂಬಾ ಮಾಡುತ್ತಿದ್ದೇವೆ. ಉದಾಹರಣೆಗೆ ಗರ್ಭ 'ಚೀಲ ತೆಗೆಯುವ ಆಪರೇಶನ್‌ನ್ನು ನಾವು ಹೊಟ್ಟೆ ಕೊಯ್ಯದೇ ಲ್ಯಾಪ್ರೋಸ್ಕೋಪಿಕ್‌ನಲ್ಲಿ ಮಾಡಿ, ಎರಡೇ, ಮೂರೇ ದಿನದಲ್ಲಿ ಡಿಸ್ಚಾರ್ಜ್ ಮಾಡಿ, ವಾರದೊಳಗೆ ಸಹಜವಾಗಿ ಕೆಲಸಗಳನ್ನು ನಿರ್ವಹಿಸುವಂತೆ ಮಾಡುತ್ತೇವೆ.

#### ಕೀರ್ತಿ ಆಸ್ಪತ್ರೆಯ ಇತರೆ ಸೇವೆಗಳು

ಕೀರ್ತಿ ಆಸ್ಪತ್ರೆಯ ಡಾ.ಮಲ್ಲಿಕಾರ್ಜುನ್‌ರ ತಜ್ಞ ವೈದ್ಯಕೀಯ ಸೇವೆಯ ಹೊರತಾಗಿ ಜನರಲ್ ಸರ್ಜನ್ಸ್, ಫಿಜಿಶಿಯನ್ಸ್, ನ್ಯೂರಾಲಜಿಸ್ಟ್, ಫಿಜಿಯೋಥೆರಪಿಸ್ಟ್, ಪೀಡಿಯಾಟ್ರಿಶಿಯನ್ಸ್, ಪ್ಲಾಸ್ಟಿಕ್ ಸರ್ಜನ್ಸ್ ಸೇವೆಯೂ ಸಿಗುತ್ತದೆ.

#### ತಂದೆ ಕನಸಿನಂತೆ ಆಸ್ಪತ್ರೆ

ದಿ. ಬಸವರಾಜಪ್ಪ ಅವರು ವಕೀಲರಾಗಿ ವೃತ್ತಿ ಜೊತೆಗೆ ಬಡವರ ಕಷ್ಟಗಳಿಗೆ ಸ್ಪಂದಿಸಿ ಸೇವೆ ಸಲ್ಲಿಸಿದ್ದರು. ತಂದೆಯ ಗುಣ ಮೈಗೂಡಿಸಿಕೊಂಡ ಮಲ್ಲಿಕಾರ್ಜುನ ಕೀರ್ತಿ ಅವರು ಡಾಕ್ಟರ್ ಆಗಬೇಕು ಎಂಬ ಕನಸು ಕಂಡರು.ತಂದೆ ಅವರು ಸಹ ಪ್ರೋತ್ಸಾಹ ನೀಡಿದರು. ಕನಸು ನನಸಾಗುವ ಜೊತೆಗೆ ಇಂದು ಕೋಟೆ ನಾಡಿನಲ್ಲಿ "ಕೀರ್ತಿ ಆಸ್ಪತ್ರೆ" ಅತ್ಯಂತ ಉತ್ತಮ ಸೇವೆ ಜೊತೆಗೆ ಜನಸೇವೆಯನ್ನು ಮಾಡುವ ಕಾಯಕವನ್ನು ಮಲ್ಲಿಕಾರ್ಜುನ ಕೀರ್ತಿ ಅವರು ಮೈಗೂಡಿಸಿಕೊಂಡಿದ್ದಾರೆ.

# ಕುವೆಂಪು ವಿವಿ ಪ್ರಶಸ್ತಿಗಿಂತ ಜನತೆ ನನಗೆ ನೀಡಿದ ರಸ್ತೆ ರಾಜ ಬಿರುದು ಹೆಚ್ಚು: ಶಾಸಕ ಡಾ.ಚಂದ್ರಪ್ಪ

» ಚಿತ್ರದುರ್ಗ

ಬಡವರ ಸಮಸ್ಯೆಗಳಿಗೆ ಸ್ಪಂದನೆ ಮಾಡುವ ವ್ಯಕ್ತಿ ಶ್ರೀಮಂತನಾಗುತ್ತಾನೆ. ಈ ದಾರಿಯಲ್ಲಿ ಚಂದ್ರಪ್ಪರವರು ಸಾಗಿದ್ದರಿಂದ ಐದು ಸಲ ಶಾಸಕರಾಗಲು ಸಾಧ್ಯವಾಗಿದೆ. ಅವರು ಗೆಲುವು ಯೋಗದಿಂದ ಬಂದಿಲ್ಲ ಅವರ ಯೋಗ್ಯತೆಯಿಂದ ಬಂದಿದೆ ಎಂದು ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾ ಸಂಸ್ಥಾನ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು ತಿಳಿಸಿದರು.

ಜೀವಮಾನದ ಸಾಧನೆ ಮತ್ತು ಕುವೆಂಪು ವಿಶ್ವ ವಿದ್ಯಾಲಯದಿಂದ ಗ್ರಾಮೀಣಾಭಿವೃದ್ದಿ ಹಾಗೂ ಶೈಕ್ಷಣಿಕ ಸೇವೆಗೆ ಗೌರವ ಡಾಕ್ಟರೇಟ್ ಪಡೆದಿರುವ ಹೊಳಲ್ಕೆರೆ ಶಾಸಕರಾದ ಎಂ. ಚಂದ್ರಪ್ಪರವರಿಗೆ ನಗರದ ಹೊರವಲಯದ ಬೋವಿ ಗುರುಪೀಠದಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಯಾವ ಮನುಷ್ಯನಿಗೆ ಗುರಿ, ಛಲ ಇಲ್ಲದಿದ್ದರೆ ಆತ ಏನನ್ನು ಸಾಧನೆ ಮಾಡಲು ಸಾಧ್ಯವಿಲ್ಲ ಆದರೆ ಚಂದ್ರಪ್ಪರವರು ತಮ್ಮ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಬೇಕೆಂದು ಕನಸು ಕಂಡಿದ್ದರಲ್ಲದೆ ಅದನ್ನು ನನಸಾಗಿ ಮಾಡಿ ತೋರಿಸಿದ್ದಾರೆ. ಇದರಿಂದ ಕ್ಷೇತ್ರ ಬಹಳಷ್ಟು ಅಭೀವೃದ್ದಿಯಾಗಿದ್ದು ಜನನಾಯಕರಾಗಿದ್ದಾರೆ. ಇದಕ್ಕೆ ಕ್ಷೇತ್ರದಲ್ಲಿನ ಮತದಾರರು ಸಹಕಾರ ನೀಡುತ್ತಿದ್ದಾರೆ. ಚಂದ್ರಪ್ಪರವರು ರಾಜಕಾರಣಿಗಳಿಗೆ ಆದರ್ಶ ರಾಜಕಾರಣಿಯಾಗಿದ್ದಾರೆ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ಅಭೀವೃದ್ದಿಯನ್ನು ಮಾಡಬಹುದೆಂದು ತೋರಿಸಿದ್ದಾರೆ, ಇದನ್ನು ಬೇರೆ ರಾಜಕಾರಣಿಗಳು ಕಲಿಯಬೇಕಿದೆ ಎಂದು ಶ್ರೀಗಳು ತಿಳಿಸಿದರು.



ಚಂದ್ರಪ್ಪರವರು ಕ್ಷೇತ್ರದಲ್ಲಿ ಮಾಡಿದ ಸೇವೆಗಾಗಿ ಪದ್ಮಶ್ರೀ, ಅಥವಾ ಪದ್ಮವಿಭೂಷಣ ಪ್ರಶಸ್ತಿ ಲಭ್ಯವಾಗಬೇಕಿತ್ತು. ಬಡತನದಿಂದ ಬಂದಿರುವ ಚಂದ್ರಪ್ಪರವರು ಬಡವರ ಕಷ್ಟಗಳನ್ನು ಅರಿತಿದ್ದರಿಂದ ಬಡವರ ಪರವಾಗಿ ಕೆಲಸವನ್ನು ಮಾಡಲು ಸಾಧ್ಯವಾಗಿದೆ. ಜನಾಂಗದ ಸಿದ್ದರಾಮರಂತೆ ಕ್ಷೇತ್ರದಲ್ಲಿ ಕೆರೆಗಳನ್ನು ನಿರ್ಮಾಣ ಮಾಡುವುದರ ಮೂಲಕ ಜನ, ಜಾನುವಾರ ಮತ್ತು ಗಿಡಗಳಿಗೆ ನೀರನ್ನು ನೀಡಿದ್ದಾರೆ. ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡುವುದರ ಮೂಲಕ ಶಿಕ್ಷಣ ದಾನಿಗಳಾಗಿದ್ದಾರೆ. ತಮ್ಮ ಕಾರ್ಯದ ಜೊತೆಗೆ ಸಮಾಜದ ವಿವಿಧ ಕಾರ್ಯವನ್ನು ಮಾಡುವುದರ ಮೂಲಕ ಸಮಾಜದ ಪ್ರಗತಿಗೆ ಮುಂದಾಗಿದ್ದಾರೆ ಎಂದು ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು ಹೇಳಿದರು. ಕಾರ್ಯಕ್ರಮ ಸಾನಿಧ್ಯವಹಿಸಿದ್ದ ಮತ್ತೋರ್ವ ಶ್ರೀಗಳಾದ ಕುಂಚಿಟಿಗ ಮಹಾ ಸಂಸ್ಥಾನದ ಡಾ. ಶಾಂತವೀರ ಶ್ರೀಗಳು ಮಾತನಾಡಿ, ಚಂದ್ರಪ್ಪರವರು ಹೊಳಲ್ಕೆರೆ ಕ್ಷೇತ್ರ ಶಾಸಕರಾದ ಮೇಲೆ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಈ ರೀತಿಯ ಕೆಲಸದ ಹಾದಿಯಲ್ಲಿ ಅವರ ಶ್ರೀಮತಿಯವರ ಪಾಲುಗಾರಿಕೆ ಇದೆ. ಮಾನವನಿಗೆ ಹೆಂಡತಿ, ಮಕ್ಕಳ, ಗುರುಗಳ ಅಂಕುಶ ಇರಬೇಕಿದೆ ಈ ರೀತಿ ಇದ್ದವರು ಉತ್ತಮವಾದ ಪ್ರಗತಿಯನ್ನು ಸಾಧಿಸುತ್ತಾರೆ ಇದಕ್ಕೆ ಚಂದ್ರಪ್ಪರವರು ಉದಾಹರಣೆಯಾಗಿದ್ದಾರೆ. ಚುನಾವಣೆಯ ಸಮಯದಲ್ಲಿ ಭೋವಿ ಸಮಾಜಕ್ಕೆ ಕುಂಚಿಟಿತ ಸಮುದಾಯ ಬೆಂಬಲವನ್ನು ನೀಡಿದೆ. ಇಂದಿನ ಇಂಜಿನಿಯರ್‌ಗಳಿಗಿಂತ ಭೋವಿ ಜನಾಂಗದವರು ಸಮಾಜದವರು ಉತ್ತಮ ಇಂಜಿನಿಯರ್‌ಗಳಾಗಿದ್ದಾರೆ. ಎಂದರು.ಇಮ್ಮಡಿ ಶ್ರೀಗಳು ಮಾತ್ರ ಹೃದಯವಂತರಾಗಿದ್ದಾರೆ. ಇವರು ಯಾವುದೇ ಪಕ್ಷಕ್ಕೆ ಸೀಮಿತವಾಗಿಲ್ಲ, ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಸಹಾ ತಮ್ಮ ಜನಾಂಗಕ್ಕೆ ಆಗಬೇಕಾದ ಕೆಲಸಗಳನ್ನು ಬುದ್ದಿವಂತಿಕೆಯಿಂದ ಮಾಡಿಸುತ್ತಾರೆ. ಇವರ ಚಾಕುಚಕ್ಯತೆ ಬೇರೆ ಶ್ರೀಗಳಿಗೆ ಬರುವುದಿಲ್ಲಎಂದಶ್ರೀಗಳುಚಂದ್ರಪ್ಪರವರಿಗೆ ಲಭ್ಯವಾಗಿ ರುವ ಡಾಕ್ಟರೇಟ್ ಪ್ರಶಸ್ತಿ ಅವರು ಮಾಡಿದ ಕಾಯಕದಿಂದ ಬಂದಿದೆ ಎಂದು ಶಾಂತವೀರ ಶ್ರೀಗಳು ತಿಳಿಸಿದರು.

ಬೋವಿ ಸಮಾಜದಿಂದ ಅಭಿನಂದನೆಯನ್ನು ಸ್ವೀಕಾರ ಮಾಡಿ ಮಾತನಾಡಿದ ಡಾ.ಎಂ.ಚಂದ್ರಪ್ಪ ಮಾತನಾಡಿ, ನನಗೆ ಡಾಕ್ಟರೇಟ್ ಸಿಗುತ್ತದೆ ಎಂದು ಕೆಲಸವನ್ನು ಮಾಡಿಲ್ಲ, ನನ್ನ ಪಾಲಿನ ಕಾಯಕವನ್ನು ಮಾಡಿದ್ದೇನೆ, ನನಗೆ ಸಿಕ್ಕ ಈ ಡಾಕ್ಟರೇಟ್‌ನ್ನು ನನ್ನ ಮತದಾರರಿಗೆಸಮರ್ಪಿಸುತ್ತೇನೆ,1994ರಲ್ಲಿ ಮೊದಲ ಬಾರಿಗೆ ಶಾಸಕನಾದಾಗ ಕಡಿಮೆ ಆಯವ್ಯಯದಲ್ಲಿ ಬಹಳಷ್ಟು ಅನುದಾನ ಸರ್ಕಾರಿ ನೌಕರರ ವೇತನಕ್ಕೆ ಹೋಗುತ್ತದೆ ಉಳಿದ ಕಡಿಮೆ ಅನುದಾನದಲ್ಲಿ ವಿವಿಧ ಅಭೀವೃದ್ಧಿ ಕಾರ್ಯವನ್ನು ಮಾಡಬೇಕಿತ್ತು ಆಗ ಗ್ರಾಮಗಳಿಗೆ ರಸ್ತೆಗಳು ಇಲ್ಲದ ಸಮಯದಲ್ಲಿ ಉತ್ತಮವಾದ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ. ಕುವೆಂಪು ವಿವಿ ನೀಡಿದ ಪ್ರಶಸ್ತಿಗಿಂತ ಜನತೆ ನನಗೆ ನೀಡಿದ ರಸ್ತೆ ರಾಜ ಬಿರುದು ಹೆಚ್ಚಾಗಿದೆ ಎಂದರು.

ನನ್ನ ಕ್ಷೇತ್ರದಲ್ಲಿ ಉತ್ತಮವಾಗಿ ಕೆಲಸವನ್ನು ಮಾಡಿದ್ದರ ಫಲವಾಗಿ ಕ್ಷೇತ್ರದ ಮತದಾರರು ಐದು ಬಾರಿ ನನನ್ನು ಗೆಲ್ಲಿಸಿದ್ದಾರೆ. ನನ್ನ ಈ ಗೆಲುವಿಗೆ ಕ್ಷೇತ್ರದ ಎಲ್ಲಾ ಮತದಾರರ ಆರ್ಶೀವಾದ ಇದೆ. ಕಾಂಗ್ರೆಸ್ ಪಕ್ಷದ ಗ್ಯಾರೆಂಟಿ ಮತ್ತು ಬಿಜೆಪಿಯ ತಪ್ಪಿನಿಂದಾಗಿ ಈ ಭಾರಿ ಸೋಲನ್ನು ಕಾಣಬೇಕಾಯಿತು. ಮೂರು ಜಿಲ್ಲೆಗಳಿಂದ ನಾನು ಒಬ್ಬನೆ ಬಿಜೆಪಿ ಶಾಸಕನಾಗಿದ್ದಾನೆ. ಸಾರ್ವಜನಿಕ ಬದುಕು ನನ್ನ ಸ್ವಂತ ಬದುಕಾಗಿದೆ. ನನ್ನ ರಾಜಕೀಯ ಜೀವನದಲ್ಲಿ ಸಮಾಜಕ್ಕೆ ಯಾವುದೇ ರೀತಿಯ ಧಕ್ಕೆ ತರುವಂತ ಕಾರ್ಯವನ್ನು ಮಾಡಿಲ್ಲ, ನನ್ನ ಈ ಬೆಳವಣಿಗೆಯಲ್ಲಿ ಸಮಾಜದ ಶ್ರೀಗಳ ಪಾತ್ರ ಹೆಚ್ಚಾಗಿದೆ. ಸಾರ್ವಜನಿಕ ಜೀವನದಲ್ಲಿ ವಿವಿ ನೀಡುವ ಪ್ರಶಸ್ತಿಗಿಂತ ಜನತೆ ನೀಡುವ ಗೌರವ ನನಗೆ ಹೆಚ್ಚಾಗಿದೆ ಎಂದು ಚಂದ್ರಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷರಾದ ಟಿ.ತಿಪ್ಪೇಸ್ವಾಮಿ, ಸಮಾಜದ ಮುಖಂಡರಾದ ನೇರ್ಲಗುಂಟೆ ರಾಮಪ್ಪ, ಶ್ರೀಮತಿ ಚಂದ್ರಕಲಾ, ಚಂದ್ರಪ್ಪ, ರಘುಚಂದನ್, ಕೃಷ್ಣಮೂರ್ತಿ, ಬಂಡೆ ರುದ್ರಪ್ಪ ವೆಂಕಟೇಶ್ ಮಂಜುನಾಥ್ ತಿಪ್ಪೇಸ್ವಾಮಿ, ಸೇರಿದಂತೆ ಇತರರು ಭಾಗವಹಿಸಿದ್ದರು.

ಸಿದ್ದೇಶ್ ಪ್ರಾರ್ಥಿಸಿದರು, ಲಕ್ಷ್ಮಣ್ ಸ್ವಾಗತಿಸಿದರು. ಕಾರ್ಯಕ್ರಮವನ್ನು ಡಿ.ಸಿ.ಮೋಹನ್ ನಿರೂಪಿಸಿದರು.

## ಶಿಕ್ಷಕ, ವಿದ್ಯಾರ್ಥಿಗಳಲ್ಲಿ ಆತ್ಮೀಯತೆ ಇರಬೇಕು

» ಚಿತ್ರದುರ್ಗ

ಶಿಕ್ಷಕನಾದವನು ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ತುಂಬಿದರೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಿದೆ ಎಂದು ನಿವೃತ್ತ ಪ್ರಾಧ್ಯಾಪಕರಾದ ಡಾ.ಎಂ. ಕೆ.ಪ್ರಭುದೇವ ತಿಳಿಸಿದರು.

ರೋಟರಿ ಕ್ಲಬ್ ಚಿನ್ಮೂಲಾದ್ರಿವತಿಯಿಂದ ನಗರದ ಎಸ್.ಆರ್.ಬಿ.ಎಂ.ಎಸ್ ರೋಟರಿ ಬಾಲಭವನದಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ, ಅಭಿಯಂತರರ ದಿನಾಚರಣೆ ಮತ್ತು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಭಂದಕ್ಕೆ ಅದರದೇ ಆದ ಮಹತ್ವ ಇದೆ. ಗುರು-ಶಿಷ್ಯರಲ್ಲಿ ಆತ್ಮೀಯತೆ, ವಿಶ್ವಾಸ, ನಂಬಿಕೆ,ಗೌರವ ಈ ಹಿಂದೆ ಇತ್ತು ಆದರೆ ಈಗ ಕಾಲ ಬದಲಾಗಿದೆ. ವಿದ್ಯಾರ್ಥಿಗಳಿಗೆ ಗುರುಗಳಾದವರು ವಂದಿಸಿ ಬುದ್ದಿಯನ್ನು ಹೇಳ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಗುರು-ಶಿಷುರ ಸಂಬಂಧಗಳು ಕಾಲ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ. ಅದರಂತೆ ಮೌಲ್ಯಗಳು ಸಹಾ ಕಡಿಮೆಯಾಗುತ್ತಿವೆ. ಹಿಂದಿನ ಕಾಲದ ಭೋದನೆಗೂ ಇಂದಿನ ಕಾಲದ ಭೋಧನೆಗೂ ಬಹಳವಾದ ವ್ಯತ್ಯಾಸ ಇದೆ, ಅದೇ ರೀತಿ ಗುರು-ಶಿಷ್ಯರಲ್ಲಿಯೂ ಸಹಾ ವಿಭಿನ್ನವಾದ ಅಭೀಪ್ರಾಯಗಳಿವೆ.

ಶಿಕ್ಷಕರಾದವರ ಮೇಲೆ ಗುರುತರವಾಧ ಜವಾಬ್ದಾರಿಗಳಿವೆ, ಅದನ್ನು ಅರಿತು ಭೋದನೆಯನ್ನು ಮಾಡಬೇಕಿದೆ.




ವಿದ್ಯಾರ್ಥಿಗಳನ್ನು ಉತ್ತಮ ದಾರಿಗೆ ತರುವಲ್ಲಿ ಶಿಕ್ಷಕರು ಮಾತ್ರವಲ್ಲದೆ ಪೋಷಕರು, ಸಮಾಜದ ಕರ್ತವ್ಯ, ಹೊಣೆಗಾರಿಕೆ ಜವಾಬ್ದಾರಿಯು ಸಹಾ ಇದೆ. ಇಂದಿನ ವಿದ್ಯಾರ್ಥಿಗಳ ಮನ ಸ್ಥಿತಿಯನ್ನು ಬದಲಾವಣೆ ಮಾಡಬೇಕಾದ ಅನಿವಾರ್ಯತೆ ಇಂದು ನಿರ್ಮಾಣವಾಗಿದೆ ಎಂದು ಪ್ರಭುದೇವ ತಿಳಿಸಿದರು.

ಶಿಕ್ಷಕನಾದವರು ತನ್ನ ವಿದ್ಯಾರ್ಥಿಗಳಿಗೆ ಮಾನವೀಯ ಮೌಲ್ಯಗಳನ್ನು ತುಂಬುವುದರ ಮುಲಕ ಸಮಾಜಕ್ಕೆ ಉತ್ತಮವಾದ ವ್ಯಕ್ತಿಯನ್ನು ನೀಡಬೇಕಿದೆ. ಇದೇ ರೀತಿ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತವಾದ ಪ್ರತಿಭೆಯನ್ನು ಸಹಾ ಹೊರಕ್ಕೆ ತರುವ ಕಾರ್ಯವನ್ನು ಮಾಡಬೇಕಿದೆ. ಆಗ ಮಾತ್ರ ಉತ್ತಮ ಶಿಕ್ಷಕನಾಗಲು ಸಾಧ್ಯವಿದೆ ಎಂದ ಅವರು, ವಿದ್ಯಾರ್ಥಿಗಳು ನಿಂತ ನೀರಾಗದೆ ಹರಿಯುವ ನೀರಾಗುವುದರ ಮೂಲಕ ತಮ್ಮ ಪ್ರತಿಭೆಯನ್ನು ಹೊರ ಹಾಕಬೇಕಿದೆ ಶಿಕ್ಷಕ-ವಿದ್ಯಾರ್ಥಿಗಳಲ್ಲಿ ಆತ್ಮೀಯತೆ ಇರಬೇಕಿದೆ. ದ್ವೇಷ ಅಸೂಯೆ ದೂರವಾಗಬೇಕಿದೆ. ಮನಸ್ಸಿನಲ್ಲಿ ಉತ್ತಮವಾದ ಭಾವನೆಯನ್ನು ಮೂಡಿಸಬೇಕಿದೆ. ಗುರು-ಶಿಷ್ಯರ ಸಂಬಂಧಗಳು ಭದ್ರವಾದ ಬುನಾದಿಯಾಗಬೇಕಿದೆ ಕವಲು ಹೊಡೆದ ದಾರಿಯಾಗಬಾರದೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರೋಟರಿ ಕ್ಲಬ್ ಚಿನ್ಮೂಲಾದ್ರಿಯ ಅಧ್ಯಕ್ಷರಾದ ಶಂಕರಪ್ಪ ಮಾತನಾಡಿ ಇಂದಿನ ದಿನಮಾನದಲ್ಲಿ ಒಬ್ಬ ಇಂಜಿನಿಯರ್‌ನ್ನು ನಿರ್ಮಾಣ ಮಾಡಲು ಹಲವಾರು ಜನತೆಯ ಶ್ರಮ ಇರುತ್ತದೆ ಪೂರ್ಣ ಪ್ರಮಾಣದಲ್ಲಿ ಕಲಿತ ಮೇಲೆ ಅತ ತನ್ನ ದೇಶವನ್ನು ಬಿಟ್ಟು ಬೇರೆ ದೇಶಕ್ಕೆ ಹಾರಿ ಹೋಗುವುದರ ಮೂಲಕ ಅಲ್ಲಿ ತನ್ನ ನಿಷ್ಠೆಯನ್ನು ತೋರಿಸುವುದರ ಮೂಲಕ ಕಲತ ತನ್ನ ದೇಶಕ್ಕೆ ದ್ರೋಹವನ್ನು ಮಾಡುತ್ತಾನೆ ಈ ಪದ್ದತಿ ಹೋಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಚಿನ್ಮೂಲಾದ್ರಿಯ ಕಾರ್ಯದರ್ಶೀ ಲಕ್ಷ್ಮೀಕಾಂತ, ಮಾಜಿ ಗೌರ್‍ನರ್ ಗಾಯತ್ರಿ ಶಿವರಾಂ, ಸೇರಿದಂತೆ ಇತರರು ಭಾಗವಹಿಸಿದ್ದರು.

## ಹೊಳಲ್ಕೆರೆ ಪುರಸಭೆವತಿಯಿಂದ ಸ್ವಚ್ಚತೆ ಅಭಿಯಾನಕ್ಕೆ ಚಾಲನೆ

» ಹೊಳಲ್ಕೆರೆ

ದೇಶದ ಪ್ರಧಾನಿ ನರೇಂದ್ರಮೋದಿರವರ ಆಶಯ ಸ್ವಚ್ಚತಾ ಅಭಿಯಾನ ಯಶಸ್ವಿಯಾಗಬೇಕಾದರೆ ಜನಪ್ರತಿನಿಧಿಗಳು, ಸಾರ್ವಜನಿಕರು, ಪೌರ



ಕಾರ್ಮಿಕರು ಒಗ್ಗೂಡಿ ಕೆಲಸ ಮಾಡಿದಾಗ ಮಾತ್ರ ಸಾಧ್ಯ ಎಂದು ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು. ಪ್ರಧಾನಿ ನರೇಂದ್ರಮೋದಿರವರ ಹುಟ್ಟುಹಬ್ಬದ ಪ್ರಯುಕ್ತ ಪುರಸಭೆ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಸ್ವಚ್ಚತಾ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಪ್ರಧಾನಿ ನರೇಂದ್ರಮೋದಿ ಸ್ವಚ್ಚತೆ ಬಗ್ಗೆ ಅಪಾರ ಕಾಳಜಿ ವಹಿಸಿದ್ದಾರೆ. ಸ್ವಚ್ಚತೆ ಎನ್ನುವುದು ಕೇವಲ ಪೌರ ಕಾರ್ಮಿಕರ ಕೆಲಸವೆಂದು ತಿಳಿದುಕೊಂಡು ಯಾರು ಸುಮ್ಮನಾಗಬಾರದು. ಪ್ರತಿಯೊಬ್ಬರು ತಮ್ಮ ತಮ್ಮ ಮನೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಶುದ್ದವಾಗಿಟ್ಟುಕೊಳ್ಳಬೇಕು. ಇದಕ್ಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪೂರಕವಾಗಿ ಕೆಲಸ ಮಾಡುತ್ತಿದ್ದಾರೆ. ವಿಶ್ವದಲ್ಲಿಯೇ ಹೆಸರುವಾಸಿಯಾಗಿರುವ ನಮ್ಮ ದೇಶದ ಪ್ರಧಾನಿ ಪೌರ ಕಾರ್ಮಿಕನೊಬ್ಬನ ಪಾದ ತೊಳೆದು ಪೂಜೆ ಮಾಡಿರುವುದು ಇಡಿ ವಿಶ್ವದ ಇತಿಹಾಸದಲ್ಲಿಯೇ ಎಲ್ಲಿಯೂ ಇಲ್ಲ. ನಿಮಗೆ ನೀಡುವ ಸಂಬಳ ಕಡಿಮೆಯಿರಬಹುದು. ಆದರೆ ಜವಾಬ್ದಾರಿ ದೊಡ್ಡದು. ಪ್ರತಿನಿತ್ಯವೂ ಬೆಳಗ್ಗೆ ಎದ್ದು, ಪ್ರಾಮಾಣಿಕತೆ, ದಕ್ಷತೆಯಿಂದ ಇಡಿ ಊರನ್ನೇ ಸ್ವಚ್ಚಗೊಳಿಸುವ ಕಾಯಕದಲ್ಲಿ ತೊಡಗುವುದು ನಿಜವಾಗಿಯೂ ದೇವರಿಗೆ ಮುಟ್ಟಿಸುವ ಕೆಲಸ. ಸ್ವಚ್ಚತೆ ಎನ್ನುವುದು ಕೇವಲ ಒಂದು ದಿನದ ಅಭಿಯಾನವಾಗಬಾರದು. ದಿನನಿತ್ಯವು ಸ್ವಚ್ಚತೆಗೆ ಒತ್ತು ಕೊಡಬೇಕು. ಆಗ ಮಾತ್ರ ಯಾವುದೇ ರೋಗ ರುಜಿನಗಳಿಲ್ಲದ ಆರೋಗ್ಯ ಪೂರ್ಣ ಸಮಾಜ ಕಟ್ಟಬಹುದು ಎಂದು ತಿಳಿಸಿದರು.

ಹೊಳಲ್ಕೆರೆ ತಹಶೀಲ್ದಾರ್ ಶ್ರೀಮತಿ ಬೀಬಿ ಫಾತಿಮ, ಪುರಸಭೆ ಸದಸ್ಯರು, ಆಯುಕ್ತ ವಾಸೀಂ ಈ ಸಂದರ್ಭದಲ್ಲಿ ಹಾಜರಿದ್ದರು.

## ಪ್ರಮುಖ ಸುದ್ದಿ

### ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ವಿಶ್ವಕರ್ಮ ಜಯಂತಿ ಉದ್ಘಾಟಿಸಿದ ಶಾಸಕ ಡಾ.ಎಂ.ಚಂದ್ರಪ್ಪ

# ಅನಾದಿ ಕಾಲದಿಂದಲೂ ವಿಶ್ವಕರ್ಮ ಜನಾಂಗಕ್ಕೆ ದೊಡ್ಡ ಗೌರವವಿದೆ

» ಹೊಳಲ್ಕೆರೆ

ವಿಶ್ವಕರ್ಮ ಸಮಾಜ ಎಲ್ಲಿಯವರೆಗೂ ಸಂಘಟನೆಯಾಗುವುದಿಲ್ಲವೋ ಅಲ್ಲಿಯತನಕ ಸರ್ಕಾರದಿಂದ ಸೌಲಭ್ಯಗಳು ಸಿಗುವುದು ಕಷ್ಟ ಎಂದು ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ ವಿಶ್ವಕರ್ಮ ಜನಾಂಗವನ್ನು ಜಾಗೃತಿಗೊಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನಡೆದ ವಿಶ್ವಕರ್ಮ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದ ಶಾಸಕ ಡಾ.ಎಂ.ಚಂದ್ರಪ್ಪ ಅನಾದಿ ಕಾಲದಿಂದಲೂ ವಿಶ್ವಕರ್ಮ ಜನಾಂಗಕ್ಕೆ ದೊಡ್ಡ ಗೌರವವಿದೆ. ಯಾರಿಗೂ ಅನ್ಯಾಯ ಮಾಡಿದವರಲ್ಲ. ಇಡಿ ವಿಶ್ವದಲ್ಲಿಯೇ ವಿಶ್ವಕರ್ಮ ಜನಾಂಗದವರಿದ್ದಾರೆ. ನಿಮ್ಮ ಕಷ್ಟಗಳನ್ನು ಮತ್ತೊಬ್ಬರಿಗೆ ಹೇಳಿಕೊಳ್ಳಲು ನಾಚಿಕೆ ಪಟ್ಟುಕೊಳ್ಳುವ ಸಮಾಜ ನಿಮ್ಮದು. ಎಷ್ಟೆ ನೋವು ಸಮಸ್ಯೆಗಳಿದ್ದರೂ ಒಳಗೆ ನುಂಗಿಕೊಂಡು ಕೆಲಸ ಮಾಡುವ



ಜಾಯಮಾನ ನಿಮ್ಮದು ಎಂದು ಗುಣಗಾನ ಮಾಡಿದರು. ದೇಶದ ಪ್ರಧಾನಿ ನರೇಂದ್ರಮೋದಿರವರು ವಿಶ್ವಕರ್ಮ ಜನಾಂಗ ಕುಲಕಸುಬು ಮಾಡುವುದಕ್ಕಾಗಿ ಮೂರರಿಂದ ಐದು ಲಕ್ಷ ರೂ.ಗಳನ್ನು ಶೇ.5 ರ ಬಡ್ಡಿಯಲ್ಲಿ ಸಾಲ ಯೋಜನೆಯನ್ನು ಜಾರಿಗೊಳಿಸಿದ್ದಾರೆ.ಸರ್ಕಾರದಿಂದಸೌಲಭ್ಯ ಪಡೆಯುವುದು ಹೇಗೆ, ಯಾವ ರೀತಿ ಅರ್ಜಿ ಸಲ್ಲಿಸಿ ಯಾವ್ಯಾವ ದಾಖಲೆಗಳನ್ನು ಅಳವಡಿಸಬೇಕು ಎನ್ನುವುದರ ಕುರಿತು ಮುಂದಿನ ದಿನಗಳಲ್ಲಿ ಮನವರಿಕೆ ಮಾಡಲಾಗುವುದು. 2 ಎ ಗೆ ಸೇರಿರುವ ವಿಶ್ವಕರ್ಮ ಜನಾಂಗಕ್ಕೆ ಜಮೀನು, ಮನೆಗಳನ್ನು ಕಟ್ಟಿಸಿಕೊಡುವುದು ಸೇರಿದಂತೆ ಅನೇಕ ಯೋಜನೆಗಳು ಸರ್ಕಾರದಲ್ಲಿದೆ. ಎಲ್ಲವನ್ನು ಪಡೆದುಕೊಂಡು ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವತ್ತ ಗಮನ ಕೊಡಿ. ನಿಮ್ಮ ಜನಾಂಗಕ್ಕೆ ಹಾಗೂ ವೈಯಕ್ತಿಕವಾಗಿ ಏನು ಬೇಕೋ ಅದನ್ನು ಒದಗಿಸುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆಂದು ಭರವಸೆ ನೀಡಿದರು.

ಸಿದ್ದರಾಮೇಶ್ವರ ಬಡಾವಣೆಯಲ್ಲಿ ಸಮುದಾಯ ಭವನ ಕಟ್ಟುವಷ್ಟು ಜಾಗವಿಲ್ಲ. ಆದರೆ ಕಾಂಪೌಂಡ್ ನಿರ್ಮಾಣಕ್ಕೆ ಬೇಕಾದರೆ ಹಣ ಕೊಡುತ್ತೇನೆ. ಉಪಯುಕ್ತವಾದಕೆಲಸಮಾಡುವಜನಾಂಗ ನಿಮ್ಮದು. ಮಹಾಭಾರತದಲ್ಲಿ ಶ್ರೀಕೃಷ್ಣ, ರಾಮಾಯಣದಲ್ಲಿರಾವಣಸೂರವಿಶ್ವಕರ್ಮ ಜನಾಂಗವನ್ನು ನೆನಸುವುದುಂಟು. ಗುಣಮಟ್ಟದ ಶಿಲ್ಪಿಗಳು, ವಿನೂತನವಾಗಿ ಬಂಗಾರದ ಆಭರಣಗಳನ್ನು ತಯಾರಿಸುವ ಕಲೆ ನಿಮ್ಮಲ್ಲಿದೆ. ಉತ್ತಮ ಸಂಸ್ಕಾರ, ಸಂಸ್ಕೃತಿಯುಳ್ಳವರು. ಬೇರೆಯವರ ಸುಖಕ್ಕೆ ಸ್ಪಂದಿಸಿ ಕೆಲಸ ಮಾಡುವ ಸಮಾಜ ನಿಮ್ಮದು ಎಂದು ಶಾಸಕ ಡಾ.ಎಂ. ಚಂದ್ರಪ್ಪ ಪ್ರಶಂಶಿಸಿದರು.ಪುರಸಭೆ ಮಾಜಿ ಅಧ್ಯಕ್ಷ ಆರ್.ಅಶೋಕ್, ಮಹೇಶಣ್ಣ, ವಿವಿಧ ಇಲಾಖೆಯ ಅಧಿಕಾರಿಗಳು, ವಿಶ್ವಕರ್ಮ ಸಮಾಜದ ಮುಖಂಡರುಗಳು ಜಯಂತಿಯಲ್ಲಿ ಪಾಲ್ಗೊಂಡಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T